# 57

# "ಹೊಸ ಹಾಗೂ ಹಳೆಯ ವಿಚಾರಗಳು"

## ಓದುವ ಮನೆಪಾಠ #23

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).
- N. ನಂತರದ, ಯುದಾಯದಲ್ಲಿನ ಸೇವೆ (ಮುಂದುವರೆಯುವದು).
  - 6. ಯೇಸು ಹಾಗೂ ಸಮೂಹ (ಮುಂದುವರೆಯುವದು).
    - b. ಐಶ್ವರ್ಯ ಕುರಿತ ಬೋಧನೆ (ಲೂಕ 12:13-34).
    - c. ಎಚ್ಚರದ ಕುರಿತ ಬೋಧನೆ (ಲೂಕ 12:35-48).
    - d. ಅಪಘಾತದ ಕುರಿತ ಬೋಧನೆ (ಲೂಕ 12:49-59).
    - e. ಪಶ್ಚಾತ್ತಾಪ ಕುರಿತ ಬೋಧನೆ (ಲೂಕ 13:1-9).
  - 7. ಯೇಸು ಹಾಗೂ ಅನಾರೋಗ್ಯದ ಸ್ತ್ರೀ (ಸಬ್ಬತ್ತಿನ ಗೊಂದಲ) (ಲೂಕ 13:10-21).
- O. ಸಮರ್ಪಣೆಯ ಹಬ್ಬ (ಲೂಕ 13:22; ಯೋಹಾನ 10:22).
  - 1. ವೈರಿಗಳ ಮುಂದುವರೆದ ವಿರೋಧ (ಯೋಹಾನ 10:23-30).
  - 2. ಆತನನ್ನು ಕೊಲ್ಲುವ ಯತ್ನ (ಯೋಹಾನ 10:31-39).
- P. ಪ್ರಯಾಸದ ಸೇವೆ.
  - 1. "ಯೋರ್ದಾನಿನ ಆಚೆಯವರೆಗೆ ಯೇಸು ಮಾಡಿದ ಸೇವೆ" (ಯೋಹಾನ 10:40-42; ನೋಡಿ ಮತ್ತಾಯ 19:1, 2; ಮಾರ್ಕ 10:1).
  - 2. ಯೇಸುವನ್ನು ಪ್ರಶ್ನಿಸಿ, ಎಚ್ಚರಿಸಿದರು (ಲೂಕ 13:23-35).

## ಪರಿಚಯ

ಈ ಅಧ್ಯಯನದಲ್ಲಿ, ಪಾಲೆಸ್ತೇನಿನಲ್ಲಿ ಯೇಸು ಪೂರ್ಣ ಮಾಡಿದ ಸೇವೆಯ ಕುರಿತು ಚರ್ಚಿಸೋಣ. ನಂತರದಲ್ಲಿ ಯೂದಾಯದ ಸೇವೆಯನ್ನು ಪೂರ್ಣಮಾಡಿ, ಸಮರ್ಪಣೆಯ ಹಬ್ಬಕ್ಕಾಗಿ ಯೇಸು ಯೆರೂಸಲೇಮಿಗೆ ಹೋದ ವಿಚಾರವನ್ನು ಅರಿತ ನಂತರ, ಫೆರಿಯದ ಸೇವೆಯ ಬಗ್ಗೆ ಗಮನಿಸೋಣ.

ವೈರಿಗಳು ಯೇಸುವನ್ನು ಹೆಚ್ಚು ದ್ವೇಷಿಸಲು ಆರಂಭಿಸಿದಾಗ, ಯೇಸು ತನ್ನ ಶಿಷ್ಯರು ಅರಿಯಲೇ ಬೇಕಾದ ವಿಚಾರಗಳನ್ನು ಹೆಚ್ಚಾಗಿ ಉಪದೇಶಿಸಿದನು (ನೋಡಿ ಲೂಕ 12:22). ಆ ಬೋಧನೆಯ ಗುಣಮಟ್ಟ, ಉಪದೇಶಿಸಿದ ಅವಧಿ ಬಹಳ ವಿಶೇಷವಾಗಿತ್ತು. ಸತ್ಯದ ನಂತರ ಸತ್ಯವನ್ನು ಒತ್ತಿ ಹೇಳಲಾಯಿತು.

ಗಲಿಲಾಯದಲ್ಲಿ ಬೋಧಿಸಲ್ಪಟ್ಟ ವಿಷಯಗಳನ್ನೇ, ಪುನರಾವರ್ತಿಸಲಾಯಿತು.[1] ಯಾಕಂದರೆ ಈಗ ಅವನ ಕೇಳುಗರು ಬೇರೆ ಪ್ರದೇಶದವರಾಗಿದ್ದರು. ಅದರ ಸಂಗಡ ಯೇಸುವಿನ ಜೊತೆಯಲ್ಲಿ ಪ್ರಯಾಣ ಮಾಡಿದ ಜನರು ಸಹ ಈ ಸತ್ಯವನ್ನು ಪದೇ ಪದೇ ಕೇಳುವ ಅಗತ್ಯವಿತ್ತು (ಇದನ್ನು ನೋಡಿ; 2 ಪೇತ್ರ 1:12, 13, 15; 3:1). ಆತನು ಹೇಳಿದ ಸಂಗತಿಗಳಲ್ಲಿ ಹೊಸ ವಿಚಾರಗಳು ಸಹ ಅಡಕವಾಗಿತ್ತು. ಉದಾಹರಣೆಗೆ, ನಮ್ಮ ಧ್ಯಾನದಲ್ಲಿ ಅನೇಕ ಸಾಮ್ಯಗಳನ್ನು ಅಧ್ಯಯನ ಮಾಡಿರುವದಿಲ್ಲ.

ಈ ಹಿಂದೆ ಕ್ರಿಸ್ತನು "ಒಬ್ಬ ಮನೆಯ ಯಜಮಾನನು ತನ್ನ ಬೊಕ್ಕದಿಂದ ಹೊಸ ಹಾಗೂ ಹಳೆಯ ವಸ್ತುಗಳನ್ನು" ತೆಗೆಯುವ ಸಾಮ್ಯವನ್ನು ತಿಳಿಸಿರುವನು (ಮತ್ತಾಯ 13:52).[2] ಈ ಅಧ್ಯಯನದಲ್ಲಿ ನಮ್ಮ ಕರ್ತನು ತಿಳಿಸುತ್ತಿರುವ "ಹೊಸ" ಹಾಗೂ "ಹಳೆಯ" ಸತ್ಯಗಳನ್ನು ಚರ್ಚಿಸೋಣ.

## ದ್ರವ್ಯಾಶೆಯ ಕುರಿತ ಹಳೆಯ ಮತ್ತು ಹೊಸ ಉಪದೇಶ (ಲೂಕ 12:13-34)

### ಒಂದು ಮನವಿ (ವಚನಗಳು 13-15)

ಯೇಸು ಬೋಧಿಸುತ್ತಿರುವಾಗ, ಒಬ್ಬನು ಆತನ ಬಳಿಗೆ ಬಂದು (12:1), "ಬೋಧಕನೇ, ತಂದೆಯ ಆಸ್ತಿಯನ್ನು ನನಗೆ ಪಾಲು ಮಾಡಿಕೊಡುವಂತೆ ನನ್ನ ಅಣ್ಣನಿಗೆ ಹೇಳು" (ವಚನ 13) ಅಂದನು. ಈ ಪರಿಸ್ಥಿತಿಗೆ ಅನುಗುಣವಾದ ಕಾಯಿದೆಯನ್ನು ಧರ್ಮೋಪದೇಶಕಾಂಡದಲ್ಲಿ ತಿಳಿಸಲಾಗಿದೆ (ಧರ್ಮೋಪದೇಶಕಾಂಡ 21:15-17). ಇಂಥಹ ಪ್ರಸಂಗಗಳಲ್ಲಿ ರಬ್ಬಿಗಳು ಮಧ್ಯವರ್ತಿಗಳಾಗಿ ತೀರ್ಪು ನೀಡುತ್ತಿದ್ದರು. ಆದ್ದರಿಂದ ಆ ಮನುಷ್ಯನು, ಯೇಸು ಸಹ ತನ್ನ ರಾಜ್ಯವನ್ನು ಸ್ಥಾಪನೆ ಮಾಡಿರುತ್ತಾನೆ, ಆಗ ಇವನು, ತನ್ನ ಕುಟುಂಬದ ಪರವಾಗಿ ಕೀರಿಟ ಹೊಂದಿದ ಅರಸನಾಗಬಹುದೆಂದು ಭಾವಿಸಿರಬಹುದು.

ಯೇಸು ಅವನನ್ನು ಗದರಿಸಿ (ವಚನ 14). ನೆರೆದಿದ್ದ ಜನರಿಗೆ ಎಚ್ಚರಿಕೆ ನೀಡಿದನು, "ಎಲ್ಲಾ ಲೋಬಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ, ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ, ಅದು ಅವನಿಗೆ ಜೀವಾಧಾರವಾಗುವದಿಲ್ಲ" (ವಚನ 15). KJV ಅನುವಾದದಲ್ಲಿ, "ಮನುಷ್ಯನ ಜೀವವು ಅವನ ಸಂಪಾದನೆಯಲ್ಲಿ ಇರುವದಿಲ್ಲ"[3] "ಲೋಬ" ಎಂಬ ಪದವನ್ನು ಗ್ರೀಕ್ ಭಾಷೆಯಲ್ಲಿ, "ಅತಿಯಾಗಿ ಪಡಕೊಳ್ಳುವ ಅಭಿಲಾಶೆ" ಮತ್ತು ಇದನ್ನು ಕೆಟ್ಟರೂಪ ಎಂದು ಹೊಸ ಒಡಂಬಡಿಕೆಯಲ್ಲಿ[4] ಪರಿಗಣಿಸಿದೆ. ಅಗತ್ಯಕ್ಕಿಂತ ಹೆಚ್ಚಾಗಿ ಪಡೆಯುವ ಆಶೆಯನ್ನು ಕೆಲವರು ಹೊಂದಿದ್ದಾರೆ, ಆದಾಗ್ಯೂ ತೃಪ್ತರಾಗದೆ, ಸ್ವಾರ್ಥಿಗಳಾಗಿ ಪರಚಿಂತನೆಯನ್ನು ಮಾಡಲಾರರು. ಈ ವಿಧಧ ಲೋಬವನ್ನು ಸತ್ಯವೇದವು ಖಂಡಿಸುತ್ತದೆ (ಎಫೆಸ 4:19; ಕೊಲಸ್ಸೆ 3:5; ನೋಡಿ 1 ಕೊರಿಂಥ 5:11).

### ಒಂದು ಸಾಮ್ಯ (ವಚನಗಳು 16-21)

ಅದೇನೆಂದರೆ, ಒಬ್ಬಾನೊಬ್ಬ ಐಶ್ವರ್ಯವಂಥನು ಪಡೆದ ಐಶ್ವರ್ಯ ಮತ್ತು ಅದರಿಂದ ಅವನು ಏನು ಮಾಡಬೇಕೆಂದು ತೋಚದೆ ಹೋದನು (ವಚನ 15; KJV). ಅವನನ್ನು ದೇವರು "ಬುದ್ಧಿ ಹೀನನನು" ಎಂದು ಕರೆದನು (ವಚನ 20).[5]

### ಒಂದು ನಿಖರತೆ (ವಚನಗಳು 22-34)

ಈ ಐಶ್ವರ್ಯವಂತನ ನಿದರ್ಶನದಿಂದ ಯೇಸು, ಒಂದು ನಿಖರತೆಯಾದ ಸಂಗತಿಯನ್ನು ತಿಳಿಸಿದನು. ಇದರಲ್ಲಿನ ಹೆಚ್ಚಿನ ಅಂಶವನ್ನು ಪರ್ವತ[6] ಪ್ರಸಂಗದ ಬೋಧನೆಯಲ್ಲಿ ಈಗಾಗಲೇ ತಿಳಿಸಲಾಗಿದೆ. ಆದ್ದರಿಂದ ಯೇಸು ಮೊದಲು ದೇವರ ರಾಜ್ಯಕ್ಕಾಗಿ ತವಕ ಪಡೆಯಿರಿ ಅಂದನು (ವಚನ 31; ಮತ್ತಾಯ 6:33 ಹೋಲಿಸಿರಿ). ಆತನು ಅವರಿಗೆ ರಾಜ್ಯವನ್ನು ನೀಡುವೆಂಬ ಭರವಸ ನೀಡಿದನು (ವಚನ 32).[7]

ಪುನಃ ಆತನು ಪರ್ವತ ಪ್ರಸಂಗದಲ್ಲಿ ತನ್ನ ಶಿಷ್ಯರಿಗೆ "ಪರಲೋಕದಲ್ಲಿ ಗಂಟು ಮಾಡಿಟ್ಟುಕೊಳ್ಳಿ" ಅಂದನು (ಮತ್ತಾಯ 6:20ಎ). ಈಗ ಆತನು ಪರಲೋಕ ಗಂಟಿನ ಲೆಕ್ಕಾಚಾರ ಕಲಿಸಿದನು: "ನಿಮಗಿರುವದನ್ನು ಮಾರಿಬಿಟ್ಟು ದಾನ ಕೊಡಿರಿ, ಹಳೇದಾಗದಂಥ

ಹಮ್ಮಿಣಿಗಳನ್ನು ಮಾಡಿಕೊಂಡು ಪರಲೋಕದಲ್ಲಿ ಲಯವಾಗದಂಥ ದ್ರವ್ಯವನ್ನು ಇಟ್ಟುಕೊಳ್ಳಿರಿ, ಅದು ನುಸುಹಿಡಿದು ನಾಶವಾಗುವದಿಲ್ಲ" ಅಂದನು (ವಚನ 33).[8] ನೀವು ಒಂದು ಸೀತ, ಹಿಡಿದಿರುವ ಮನೆಯಲ್ಲಿ ವಾಸವಿದ್ದು, ಬೆಲೆವುಳ್ಳ ವಸ್ತುಗಳನ್ನಾ ಅಮೂಲ್ಯ ಬಟ್ಟೆಗಳನ್ನು ಪೀಠೋಪಕರಣಗಳನ್ನು ನೆಲದ ಮೇಲೆ ಹಾಕಿರುವ ಸಂದರ್ಭದಲ್ಲಿ, ನಿಮ್ಮ ಸ್ನೇಹಿತನು ಬರುವದಾದರೆ, ಅದನ್ನು ನೋಡಿ ಅವನು ಪ್ರತಿಕ್ರಿಯೆ ಏನಿರಬಹುದು? ಇವುಗಳನ್ನೆಲ್ಲಾ ನೀನು ಒಣಗಿರುವ ಮೇಲಿನ ಕೋಣೆಗೆ ಸಾಗಿಸು ಎಂದು ಹೇಳಿದರೆ, ಅವನು ನಿನಗೆ ಒಳಿತನ್ನು ಬಯಸುವವನೆಂದು ಕಾಣುವದಿಲ್ಲವೇ?[9] ಆದ್ದರಿಂದ, "ಯೇಸು ನಿನ್ನ ಅಮೂಲ್ಯವಾದ ವಸ್ತುಗಳು ಹಾಳಾಗದಂತೆ, ಅವುಗಳನ್ನು ಮೇಲೆ ಇದು ಎಂದು ಹೇಳುತ್ತಿರುವನಲ್ಲವೇ."

ಮೋಸ ಹೊಂದುತ್ತಿರುವ ಈ ಲೋಕಕ್ಕೆ, ಲೂಕ 12:13-34 ಪಾಠಗಳು ಅತಿ ಅಗತ್ಯವಾಗಿದೆ. ನಾವೆಲ್ಲರೂ ಯೇಸುವಿನ ಮಾತುಗಳನ್ನು ಪದೇ ಪದೇ ಕೇಳಬೇಕಾಗಿದೆ: "ಮನುಷ್ಯನು ಹೊಂದಿರುವ ಐಶ್ವರ್ಯದಲ್ಲಿ ಅವನ ಜೀವವು ಹುದುಗಿರುವದಿಲ್ಲ."[10] ಇದರ ಬಗ್ಗೆ ಆಲೋಚಿಸಿ: "ಮನುಷ್ಯನು ಯಶಸ್ಸು ಮತ್ತು ಅಪಜಯ, ಅವನು ಹೊಂದಿರುವ ಐಶ್ವರ್ಯವನ್ನು ಅವಲಂಭಿಸಿರುವದಿಲ್ಲ. ಅವನ ವ್ಯವಹಾರದಲ್ಲೂ ಇರುವದಿಲ್ಲ."[11] ಮನುಷ್ಯನಿಗೂ ಅವನು ಹೊಂದಿರುವ ಐಶ್ವರ್ಯದ ನಡುವೆ ವ್ಯತ್ಯಾಸವಿದೆ.

## ಸಿದ್ಧರಾಗಬೇಕಾದ ವಿಷಯದಲ್ಲಿ ಹಳೆಯ ಮತ್ತು ಹೊಸ ಉಪದೇಶ (ಲೂಕ 12:35-48)

### ಸಿದ್ಧರಾಗಬೇಕೆಂಬ ಪ್ರೋತ್ಸಾಹ (ವಚನಗಳು 35-40)

ಪರಲೋಕದ ಸ್ವಾಸ್ಥ್ಯವನ್ನು ಸಂಪಾದಿಸಿಕೊಂಡು, ಸಿದ್ಧರಾಗಿರಬೇಕೆಂದು ತನ್ನ ಶಿಷ್ಯರಿಗೆ ಉಪದೇಶಿಸುತ್ತಾ ಮುಂದುವರೆದು, ಆತನು ಹಿಂದಿರುಗುವಾಗ ಆತನಿರುವಲ್ಲಿಗೆ ಅವರೂ ಸಹ ಹೋಗುವರು ಎಂದು ಯೇಸು ತಿಳಿಸಿದನು: "ನೀವೂ ಸಹ ಸಿದ್ಧರಾಗಿರಿ, ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ ಅಂದನು" (ವಚನ 40).[12]

ಯಾವುದೇ ಸಮಯದಲ್ಲಿ ಅವರು ಸಿದ್ಧರಾಗಿರಬೇಕೆಂದು ಒತ್ತಿ ಹೇಳಿದ ನಂತರ, ಆತನು ಅನೇಕ ಸಾಮ್ಯಗಳನ್ನು ಹೇಳಿದನು. ಇಲ್ಲಿ ನಾಲ್ಕು ಪ್ರತ್ಯೇಕವಾದ ಸಾಮ್ಯಗಳಿವೆ.[13] ಕಾಯುತ್ತಿದ್ದ ಸೇವಕನ ಸಾಮ್ಯ (ವಚನಗಳು 36-38), ರಾತ್ರಿಯಲ್ಲಿ ಬರುವ ಕಳ್ಳನ ಸಾಮ್ಯ (ವಚನ 39)[14] ಒಳ್ಳೆಯ ಮನೆವಾರ್ತೆಯವನ ಸಾಮ್ಯ (ವಚನಗಳು 42-46), ಜ್ಞಾನಿಯಾಗಿದ್ದರೂ, ಅಲಕ್ಷ್ಯನಾಗಿದ್ದವನ ಸಾಮ್ಯ (ವಚನಗಳು 47, 48).

ಮೊದಲನೆಯ ಸಾಮ್ಯದಲ್ಲಿ, ಯಜಮಾನನು ಯಾವ ಹೊತ್ತಿನಲ್ಲಾದರೂ ಬರುವಾಗ, ಅವನ ಸೇವಕನು ಸಿದ್ಧನಾಗಿರಬೇಕು.[15] ಆ ಸಾಮ್ಯದಲ್ಲಿ ಯೇಸು, "ಯಜಮಾನನು ಬಂದು ಯಾವ ಯಾವ ಆಳುಗಳು ಎಚ್ಚರವಾಗಿರುವದನ್ನು ಕಂಡುಕೊಳ್ಳುವನೋ ಆ ಆಳುಗಳೇ ಧನ್ಯರು. ಆತನೇ ನಡುಕಟ್ಟಿಕೊಂಡು ಅವರನ್ನು ಊಟಕ್ಕೆ ಕೂಡ್ರಿಸಿ ಹತ್ತಿರಕ್ಕೆ ಬಂದು ಅವರಿಗೆ ಸೇವೆ ಮಾಡುವನು" (ವಚನ 37). ಕ್ರಿಸ್ತನ ಮಾತನ್ನು ಕೇಳುತ್ತಿದ್ದವರು ಯಜಮಾನನೇ ಬಂದು ಆತನ ಆಳುಗಳಿಗೆ ಸೇವೆ ಮಾಡಿದ್ದನ್ನು ಊಹಿಸಿಕೊಂಡಿರಬಹುದು - ನಂಬಿಗಸ್ತರಾದವರಿಗೆ, ದೇವರು ವ್ಯಯಕ್ತಿಕನಾದ ಬಹುಮಾನಗಳನ್ನು ನೀಡುವನು ಎಂಬುದನ್ನು ಇಲ್ಲಿ ಬಿಂಬಿಸಲಾಗಿದೆ (ಮತ್ತಾಯ 25:21; ಯೋಹಾನ 14:1-3; ಪ್ರಕಟಣೆ 21:4).

### ಹೊಣೆಗಾರಿಕೆಯನ್ನು ಒತ್ತಿ ಹೇಳಲಾಗಿದೆ (ವಚನಗಳು 41-48)

ಸೇವಕನ ಕುರಿತಾಗಿ ಯೇಸುವಿನ ಉಪದೇಶವು, ಸಾಮಾನ್ಯವಾದ ಅಥವಾ ತನಗೂ ಹಾಗೂ ಅಪೊಸ್ತಲರಿಗೂ ಸಂಬಂಧಪಟ್ಟ ವಿಷಯವೆಂದು ಆಶ್ಚರ್ಯಪಟ್ಟನು (ವಚನ 41).

ಆದ್ದರಿಂದ ಕ್ರಿಸ್ತನು ಸೇವಕನ ಕುರಿತ ಮತ್ತೊಂದು ಸಾಮ್ಯವನ್ನು ಹೇಳಿದನು.[16] ಹೊತ್ತು ಹೊತ್ತಿಗೆ ಬೇಕಾದದ್ದನ್ನು ಅಳೆದು ಕೊಡುವದಕ್ಕೆ ಯಜಮಾನನ್ನು ತನ್ನ ಮನೆಯವರ ಮೇಲೆ ನೇಮಿಸಿದ ನಂಬಿಗಸ್ತನೂ ವಿವೇಕಿಯೂ ಆದ ಮನೆವಾರ್ತೆಯವರ ಮೇಲೆ ನೇಮಿಸಿದ ನಂಬಿಗಸ್ತನೂ, ವಿವೇಕಿಯೂ ಆದ ಮನೆವಾರ್ತೆಯವನು ಯಾರು? (ವಚನ 42). ಯಜಮಾನನು ಬಂದು ಯಾವ ಆಳು ಹೀಗೆ ಮಾಡುವದನ್ನು ಕಾಣುವನೋ ಆ ಆಳು ಧನ್ಯನು, ಅವನಿಗೆ ಬಹುಮಾನ ದೊರೆಯುವದು (ವಚನಗಳು 43, 44). ಒಂದು ವೇಳೆ ಅವನು ಗಂಡಾಳು ಹಾಗೂ ಹೆಣ್ಣಾಳುಗಳನ್ನು ಹೊಡೆದರೆ, ಅವನನ್ನು ಶಿಕ್ಷಿಸುವನು (ವಚನಗಳು 45, 46)[17] ಫರಿಸಾಯರನ್ನು ಹಾಗೂ ಸದ್ದುಕಾಯರನ್ನು ಉದ್ದೇಶವಾಗಿ ಇಟ್ಟುಕೊಳ್ಳದೆ ಇದ್ದರೆ, ಈ ವಾಕ್ಯಭಾಗವನ್ನು ಅರ್ಥಮಾಡಿಕೊಳ್ಳಲು ಅಸಾಧ್ಯ (ಮತ್ತಾಯ 23:2). ಅವರು ಜನರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳದೆ, ಅಪನಂಬಿಗಸ್ತರಾಗಿದ್ದರು (ಮತ್ತಾಯ 9:36; ಯೋಹಾನ 10:12).

ನಂತರದಲ್ಲಿ ಕ್ರಿಸ್ತನು "ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧಮಾಡದೆ ಹೋದರೆ ಅಥವಾ ಅವನ ಚಿತ್ತಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು" ಅಂದನು (ವಚನಗಳು 47, 48ಎ). ನರಕದಲ್ಲಿ ಇರಬಹುದಾದ ವಿವಿಧ ರೀತಿಯ ಶಿಕ್ಷೆಗಳ[18] ಕುರಿತು *ಮನದಟ್ಟು ಮಾಡುವ ಉದ್ದೇಶದಿಂದ ಕ್ರಿಸ್ತನು ಇದನ್ನು ಪ್ರಕಟಪಡಿಸುತ್ತಿರುವದಿಲ್ಲ.* ಆದರೆ ಹೊಣೆಗಾರಿಗಾಗಿರುವ ಅವಕಾಶದ ಕುರಿತು ತಿಳಿಸಿದ್ದಾನೆ. ಆತನು ಮುಂದುವರೆಸಿ, "ಯಾವನಿಗೆ ಬಹಳವಾಗಿ ಕೊಟ್ಟಿದೆಯೇ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು" (ವಚನ 48ಬಿ). ಹೆಚ್ಚಿನ ಅವಕಾಶ ಅಂದರೆ, ಹೆಚ್ಚಿನ ಹೊಣೆಗಾರಿಕೆ (ನೋಡಿ ಯಾಕೋಬ 3:1).

ಯೇಸುವಿನ ಬೋಧನೆಯು ಪೇತ್ರ ಹಾಗೂ ಶಿಷ್ಯರಿಗೆ ಮಾತ್ರ ಮೀಸಲಾಗಿತ್ತೋ ಎಂಬ ಪ್ರಶ್ನೆಗೆ (ಲೂಕ 12:41). ಹೌದು ದೇವರು ಅವರಿಗೆ ನಿರ್ದಿಷ್ಟವಾದ ಜವಾಬ್ದಾರಿಗಳನ್ನು ನೀಡಿದ್ದನು. ಕರ್ತನು ನೀಡಿದ ಪ್ರತಿಕ್ರಿಯೆಯನ್ನು ದಿ ನ್ಯೂ ಲಿವಿಂಗ್ ಅನುವಾದದಲ್ಲಿ "ಕರ್ತನು *ನೀಡುವ ಜವಾಬ್ದಾರಿಯನ್ನು* ಹೊರತು ನಂಬಿಗಸ್ತರ ಸಂಗಡ ಆತನು ಮಾತನಾಡುತ್ತಿದ್ದಾನೆ" (ವಚನ 42; ಒತ್ತಿ ಹೇಳಿದ್ದು ನನ್ನದು). ಒಂದು ವೇಳೆ ಪೇತ್ರನಾಗಲೀ ಅಥವಾ ಅಪೊಸ್ತಲರಾಗಲೀ ಯೇಸು ನೀಡಿದ ಈ ಮಾತಿನ ಅರ್ಥವನ್ನು ಗ್ರಹಿಸಿಕೊಂಡರೆ, ಈ ಸಾಮ್ಯದಿಂದ ಅವರು ವಿಶೇಷ ಪಾಠವನ್ನು ಕಲಿಯಲು ಸಾಧ್ಯ ಲೂಕ 12:47, 48 ನಮ್ಮೊಂದಿಗೂ ಸಹ ಮಾತನಾಡುತ್ತದೆ: ದೇವರು ನಮಗೆ ಹೆಚ್ಚಾಗಿ ನೀಡಿರುವದಿಲ್ಲವೇ?[19] ಆದ್ದರಿಂದ ನಮ್ಮಿಂದ ಆತನು ಹೆಚ್ಚಾಗಿ ಬಯಸುತ್ತಾನಲ್ಲವೇ? "ಕಿವಿಯುಳ್ಳವನು, ಕೇಳಲಿ" (ಪ್ರಕಟಣೆ 2:7ಎ).

## ನಿರಾಕರಣೆಯ ಕುರಿತ ಹಳೆಯ ಮತ್ತು ಹೊಸ ಉಪದೇಶ (ಲೂಕ 12:49-59)

### ತಿರಸ್ಕೃತವು ಸಮಾಧಾನವನ್ನು ನಾಶಮಾಡುತ್ತದೆ (ವಚನಗಳು 49-53)

ಯೇಸು ಹಿಂದಿರುಗಿದ ನಂತರ (12:40), ಆತನ ಮರಣದ ಮುಂಚೆ, ಸಂಭವಿಸಬಹುದಾದ ಅನೇಕ ಘಟನೆಗಳ ಬಗ್ಗೆ ಮುಂತಿಳಿಸಿದನು: "ನಾನು ಬೆಂಕಿಯನ್ನು ಭೂಮಿಯ ಮೇಲೆ ಹಾಕಬೇಕೆಂದು ಬಂದೆನು: ಅದು ಇಷ್ಟರೊಳಗೆ ಹತ್ತಿಕೊಂಡಿದ್ದರೆ ನನಗೆ ಎಷ್ಟೋ ಸಂತೋಷ! ಆದರೆ ನಾನು ಹೊಂದತಕ್ಕ ದೀಕ್ಷಾಸ್ನಾನ ಒಂದುಂಟು ಅದು ನೆರವೇರುವ ತನಕ ನಾನು ಎಷ್ಟೋ ಬಿಕ್ಕಟ್ಟಿನಲ್ಲಿದ್ದೇನೆ" (ವಚನಗಳು 49, 50). "ದೀಕ್ಷಾಸ್ನಾನ" ಆತನ ಮರಣಕ್ಕೆ[20] ಸಂಬಂಧಪಟ್ಟಿದೆ. ಆತನು ಶಿಲುಬೆಯ ಕ್ರಮವನ್ನು ಬಯಸಿದ್ದನು. ರಾಬರ್ಟ್‌ಸನ್‌ರವರು ಈ ಕುರಿತು: "ರಕ್ಷಕನ ಹೃದಯದಲ್ಲಿ ಅಡಗಿದ್ದ ಬಾಧೆಯು ಜ್ವಾಲಾಮುಖಿಯ ಏರಿಳಿತವನ್ನು ಆತನ

ಬಾಹಿರವಾದ ಭಾವದಿಂದ ಅಳೆಯ ಬಹುದಾಗಿದೆ."[21]

"ಭೂಮಿಯ ಮೇಲೆ" ಬೆಂಕಿ, ಅಂದರೆ, ಆತನು ಮಾಡಿದ ಸೇವೆಯ "ಪರಿಣಾಮದ" ಕುರಿತು ಅರ್ಥವಾಗಿದೆ. ಯೇಸು ತನ್ನ ಮಾತನು ಮುಂದುವರೆಸಿ, "ಭೂಲೋಕದಲ್ಲಿ ಸಮಾಧಾನವುಂಟು ಮಾಡುವದಕ್ಕೆ ಬಂದೆನೆಂದು ಭಾವಿಸುತ್ತೀರೋ? ಅದಕ್ಕೆ ಬರಲಿಲ್ಲ, ಭೇದ ವನ್ನುಂಟು ಮಾಡುವದಕ್ಕೆ ಬಂದೆನು" (ವಚನ 51; ನೋಡಿ ಮತ್ತಾಯ 10:34). ಕ್ರಿಸ್ತನ ಈ ಮಾತುಗಳನ್ನು ಅಪಾರ್ಥ ಮಾಡಿಕೊಳ್ಳಬೇಡಿ ಆತನು ಶಾಂತಿಯನ್ನು ಇಷ್ಟಪಟ್ಟನು, ಭೇದವನ್ನಲ್ಲಾ. ಆತನು ತನ್ನ ಶಿಷ್ಯರಿಗೆ "ಒಬ್ಬರಿಗೊಬ್ಬರು ಸಮಾಧಾನದಿಂದಿರಿ" (ಮಾರ್ಕ 9:50) ಎಂದು ಬೇಡಿಕೊಂಡನು. ಆತನ ಪ್ರತಿ ಅನುಯಾಯಿಯೂ "ಎಲ್ಲರೊಂದಿಗೆ ಸಮಾಧಾನದಿಂದಿರಬೇಕು" (ಇಬ್ರಿಯ 12:14).[22] ಅದೇ ಸಂದರ್ಭದಲ್ಲಿ ಕೆಲವರು ಆತನನ್ನು ಒಪ್ಪಿದರೆ, ಇನ್ನು ಕೆಲವರು ಆತನನ್ನು ತಿರಸ್ಕರಿಸುವರು ಎಂದು ಸಹ ತಿಳಿದಿದ್ದನು - ಆಗ ಬೇಧವಾಗುವ ಸಾಧ್ಯತೆಯಿತು.

> ಹೇಗೆಂದರೆ - ಇಂದಿನಿಂದ ಒಂದೇ ಮನೆಯಲ್ಲಿರುವ ಐದು ಮಂದಿಯೊಳಗೆ ಇಬ್ಬರಿಗೆ ವಿರೋಧವಾಗಿ ಮೂವರು, ಮೂವರಿಗೆ ವಿರೋಧವಾಗಿ ಇಬ್ಬರು, ಈ ಮೇರೆಗೆ ಭೇದ ವುಳ್ಳವರಾಗಿರುವರು. ಮಗನಿಗೆ ವಿರೋಧವಾಗಿ ತಂದೆಯು ತಂದೆಗೆ ವಿರೋಧವಾಗಿ ಮಗನು, ಮಗಳಿಗೆ ವಿರೋಧವಾಗಿ ತಾಯಿಯು ತಾಯಿಗೆ ವಿರೋಧವಾಗಿ ಮಗಳು, ಸೊಸೆಗೆ ವಿರೋಧವಾಗಿ ಅತ್ತೆಯು, ಅತ್ತೆಗೆ ವಿರೋಧವಾಗಿ ಸೊಸೆಯು ಭೇದ ವುಳ್ಳವರಾಗಿರುವರು ಅಂದನು (ಲೂಕ 12:52, 53; ನೋಡಿ ಮತ್ತಾಯ 10:35, 36).[23]

ಮೇಲಿನ ವ್ಯಾಖ್ಯಾನವನ್ನು ನಿಮ್ಮಲ್ಲಿ ಕೆಲವರು ನನಗಿಂತಲೂ ಹೆಚ್ಚಾಗಿ ಅರಿತಿರುವ ಸಾಧ್ಯತೆಯಿದೆ. ಒಂದು ವೇಳೆ ಎಲ್ಲಿಯಾದರೂ ಅಂಥಹ ಭೇದ ಉಂಟಾದರೆ ಅದು ದೇವರ ಹೃದಯವನ್ನು ಮುರಿಯುತ್ತದೆ.

### ತಿರಸ್ಕೃತವು ಗ್ರಹಿಕೆಯನ್ನು ನಾಶಮಾಡುತ್ತದೆ (ವಚನಗಳು 54-59)

ಯೇಸುವಿನ ಮಾತುಗಳನ್ನು ಕೇಳಿದವರಲ್ಲಿ ಅನೇಕರು ಯೇಸುವನ್ನು ತಿರಸ್ಕರಿಸಿದರು (ವಚನ 56). ಅಂಥವರು ಈಗಾಗಲೇ ತೀರ್ಪಿಗೆ ಒಳಗಾಗಿದ್ದಾರೆ (ವಚನ 57). ಅವರು ಸಮಯವನ್ನು "ಶೋಧಿಸಲಾರದೆ" ಹೋದರು - ಆತನ ಮಹತ್ಕಾರ್ಯಗಳನ್ನು ಆತನ ಜೀವಿತವನ್ನು ಆತನ ಬೋಧನೆಗಳನ್ನು - ಆತನೇ ಮೆಸ್ಸೀಯನೆಂದು ಗ್ರಹಿಸಲಾರದೆ ಹೋದರು (ವಚನಗಳು 54-56; ನೋಡಿ ಮತ್ತಾಯ 16:2, 3). ಆಸ್ತಿಯನ್ನು ಪಾಲುಮಾಡಲು ಕರೆದ ವ್ಯಕ್ತಿಯು ಪ್ರಾಯಶಃ ಇತರರೊಂದಿಗೆ ಹೊಂದಿಕೊಂಡು ಹೋಗಬೇಕೆಂಬ ಸೂಚನೆಯನ್ನು ಇದರಿಂದ ಪಡೆದಿರಬಹುದು (ವಚನಗಳು 58, 59; ನ್ನು ಮತ್ತಾಯ 5:25, 26 ರೊಂದಿಗೆ ಹೋಲಿಸಿ). ಒಬ್ಬನು ಕರ್ತನನ್ನು ತಿರಸ್ಕರಿಸಿದರೆ, ತನ್ನ ಗ್ರಹಿಕೆಯನ್ನು ನಾಶಪಡಿಸಿಕೊಳ್ಳುವನು.

## ಮಾನಸಾಂತರದ ಕುರಿತ ಹಳೆಯ ಹಾಗೂ ಹೊಸ ಉಪದೇಶಗಳು (ಲೂಕ 13:1-9)

### ಮಾನಸಾಂತರ ಇಲ್ಲವೇ ನಾಶನ (ವಚನಗಳು 1-5)

ಯೇಸು ಉಪದೇಶಿಸುವದನ್ನು ಮುಂದುವರೆಸಿದಾಗ (ವಚನ 1ಎ), ಕೆಲವರು ಆತನ ಹತ್ತಿರದಲ್ಲಿದ್ದು, "ಪಿಲಾತನು ಗಲಿಲಾಯದವರ ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ

ಬೆರಸಿದನೆಂದು ಆತನಿಗೆ ತಿಳಿಸಿದನು'' (ವಚನ 1ಬಿ).[24] ಇದರ ಮೂಲಕ ಯೇಸು ಮಾನಸಾಂತರದ ಪಾಠ ಕಲಿಸುವ ಅವಕಾಶ ಪಡೆದನು:

> ಆ ಗಲಿಲಾಯದವರು ಅಂಥ ಕೊಲೆಯನ್ನು ಅನುಭವಿಸಿದ್ದರಿಂದ ಅವರನ್ನು ಎಲ್ಲಾ ಗಲಿಲಾಯದವರಿಗಿಂತ ಪಾಪಿಷ್ಠರೆಂದು ಭಾವಿಸುತ್ತಿರೋ? ಹಾಗೆ ಭಾವಿಸಕೂಡದೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ. ಇಲ್ಲವೆ ಸಿಲೋವಾಮಿನಲ್ಲಿ ಬುರುಜುಬಿದ್ದು ಸತ್ತ ಆ ಹದಿನೆಂಟು ಮಂದಿಯು ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಮನುಷ್ಯರಿಗಿಂತಲೂ ಅಪ ರಾಧಿಗಳೆಂದು ಭಾವಿಸುತ್ತಿರೋ? ಹಾಗಲ್ಲವೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೆ ಹಾಳಾಗಿ ಹೋಗುವಿರಿ ಎಂದು ಹೇಳಿದನು (ವಚನಗಳು 2-5).

ಈ ಘಟನೆಯ ಬಗ್ಗೆ ಇತಿಹಾಸದಲ್ಲಿ ಯಾವುದೇ ಮಾಹಿತಿ ಇರುವದಿಲ್ಲ. ಆ ಅಪರಾಧಿಗಳು ಯಾರೇ ಇರಲಿ ಅವರು ಬಾಧೆಗೆ ಪಾತ್ರರು ಎಂದು ಯೆಹೂದ್ಯರು ಪರಿಗಣಿಸಿದ್ದರು. ಒಬ್ಬನ ಬಾಧೆಯ ನಿಮಿತ್ತ ಅವನ ಪಾಪವನ್ನು ಅಳೆಯಲಾಗದು ಎಂದು ಯೇಸು ಈ ಹಿಂದೆ ಬೋಧಿಸಿದನು (ಯೋಹಾನ 9:3).[26] ಆದರೆ ಇಲ್ಲಿ ಎಲ್ಲರೂ ಪಾಪಿಗಳೇ ಎಂದು ತಿಳಿಸುತ್ತಿದ್ದಾನೆ (ನೋಡಿ ರೋಮಾಪುರ 3:23). ಅದು ಒಂದು ಆತ್ಮಿಕ ಮರಣ (ನೋಡಿ ರೋಮಾಪುರ 6:23). *ನೀವು* ಮಾನಸಾಂತರ ಪಡೆದಿದ್ದರೆ ನಾಶವಾಗುವಿರಿ ಎಂಬುದು ನಿರ್ಣಾಯಕವಾಗಿದೆ (ಲೂಕ 13:3, 5; ಒತ್ತಿ ಹೇಳಿದ್ದು ನನ್ನದು). ಮಾನಸಾಂತರವು, ಬದಲಾದ ಜೀವಿತದ ಸೂಚನೆ, ನಾನು ಮಾಡಿರುವ ಪಾಪ, ಘೋರವಾದದ್ದು ಎಂಬ ಅರಿವನ್ನು ಪಡೆದು, ಕರ್ತನ ಸಹಾಯದಿಂದ ಜೀವಿತವನ್ನು ಬದಲಾಯಿಸಿ ಕೊಳ್ಳುವದೇ ಆಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ, ಮಾನಸಾಂತರವು ಪ್ರಮುಖ ಕ್ರಿಯೆಯಾಗಿರುತ್ತದೆ.

**ಮಾನಸಾಂತರ ಇಲ್ಲವೆ ಪ್ರತ್ಯೇಕವಾಗು (ವಚನಗಳು 6-9)**

ಈ ಸಾಮ್ಯದಿಂದ ಕ್ರಿಸ್ತನು, ದೇವರು ದೀರ್ಘಶಾಂತನೆಂದು ಪ್ರಕಟಿಸುತ್ತಿದ್ದಾನೆ (ರೋಮಾಪುರ 2:4; 2 ಪೇತ್ರ 3:9). ಆದರೆ ಆತನ ಕರುಣೆಗೆ ಒಂದು ಎಲ್ಲೆ ಇದೆ (ರೋಮಾಪುರ 2:5, 6; ಯೆರೆಮೀಯ 8:20; ಅಮೋಸ 4:12). ಅದನ್ನು ಸಾಬೀತು ಪಡಿಸಲು, ಮೂರು ವರ್ಷದಿಂದಲೂ ಫಲವನ್ನೇ ನೀಡದ ಅಂಜೂರ ಮರದ ದೃಷ್ಟಾಂತವನ್ನು ಹೇಳಿದನು.[27] ಆದರೂ ಅದಕ್ಕೆ ಇನ್ನೊಂದು ಅವಕಾಶವನ್ನು ನೀಡಲಾಯಿತು. ಮತ್ತೊಂದು ವರ್ಷಕಾಲ ಅದಕ್ಕೆ ಉತ್ತಮವಾದ ಪೋಷಣೆಯನ್ನು ನೀಡಿ, ಆದರೂ ಅದು ಫಲನೀಡದೆ ಹೋದರೆ, ಅದನ್ನು ಕತ್ತರಿಸಬೇಕು ಅಂದನು. ಆ ಅಂಜೂರದ ಮರ ಅಪ್ರಯೋಜಕ ಮಾತ್ರವಲ್ಲದೆ, ಅದು ಇತರರಿಗೆ ಅಡಚಣೆಯಾಯಿತು, ಇತರೆ ಮರಗಳ ಪೋಷಕಾಂಶವನ್ನು ತಾನೇ ಕಬಳಿಸಿತು. ಅದನ್ನು ಕಡಿದು ಹಾಕಬೇಕಾಯಿತು.

ಇಸ್ರಾಯೇಲ ಜನಾಂಗಕ್ಕೆ ಈ ನಿದರ್ಶನವನ್ನು ಹೋಲಿಸಬಹುದಾಗಿದೆ. ಯೇಸು ಅವರೊಂದಿಗೆ, ಮೂರು ವರ್ಷಗಳ ಕಾಲ ವಾಸಮಾಡಿದ್ದರೂ, ಅವರು ತಮ್ಮ ಅಪನಂಬಿಕೆಯ ನಿಮಿತ್ತ ಫಲಹೀನರಾದರು. ಕ್ರಿಸ್ತನು ಅವರೊಂದಿಗೆ ಕೆಲವಾರು ತಿಂಗಳು ವಾಸಿಸುವ ಅವಕಾಶ ನೀಡಲಾಯಿತು. ಆತನು ಆರೋಹಣವಾದ ನಂತರ, ಯೆರೂಸಲೇಮಿನಲ್ಲಿರುವವರ ಪಾಪದ ಅರಿವನ್ನು ಉಂಟುಮಾಡುವ ಪವಿತ್ರಾತ್ಮವನ್ನು ಕಳಹಿಸುವನೆಂಬ ವಾಗ್ದಾನವನ್ನು ಮಾಡಿದನು (ಯೋಹಾನ 16:8). ಮತ್ತು ಆತನ ರಾಜ್ಯವನ್ನು[28] ಸ್ಥಾಪಿಸುವನೆಂದೂ ಹೇಳಿದನು. ಇಷ್ಟರ ನಂತರವೂ ಅವರು ಮಾನಸಾಂತರ ಪಡದಿದ್ದರೆ, ಅವರನ್ನು ದೇವಜನರ ಮಧ್ಯದಿಂದ ಪ್ರತ್ಯೇಕ ಮಾಡುವನು, ನಂತರ ಅವರ ನಾಶನವು ಹತ್ತಿರದಲ್ಲೇ ನೆಲಸಿತ್ತು.[29]

ನಾವುಗಳು ಇದನ್ನು ಇತರರಿಗೆ ಸೀಮಿತವಾದದ್ದು ಎಂದು ತಿಳಿಯಬಾರದು. ಕರ್ತನ ಪ್ರತಿಯೊಂದು ಉಪದೇಶವನ್ನು ನಮ್ಮಗಳ ಜೀವಿತಕ್ಕೆ ಅಳವಡಿಸಿಕೊಳ್ಳಬೇಕು. ನಾವು ಪ್ರತಿಫಲ ನೀಡುವಂತೆ, ಮಾನಸಾಂತರದ ಅವಕಾಶವನ್ನು ಹೊಂದಿದ್ದೇವೆ.[30] ಒಂದು ಹಂತದಲ್ಲಿ ನಾವುಗಳು ನಮಗೆ ದೊರಕಿದ ಅವಕಾಶವನ್ನು ಅಲಕ್ಷ್ಯಮಾಡುವದಾದರೆ, "ಇಷ್ಟು ಸಾಕು, ಫಲರಹಿತರನ್ನು ಹೊರಹಾಕಿ" ಅನ್ನುವದು. ಜ್ಞಾನಿಗಳಿಗೆ ಒಂದು ಮಾತು: ತಡವಾಗುವ ಮೊದಲು, ಮಾನಸಾಂತರ ಪಟ್ಟು ಬದಲಾಗುವ ಸಂದರ್ಭವು ಇದೇ ಆಗಿದೆ.

## ಆನಂದದ ಕುರಿತ ಹಳೆಯ ಹಾಗೂ ಹೊಸ ಉಪದೇಶಗಳು (ಲೂಕ 13:10-21)

### ಆನಂದಗೊಳ್ಳದವರ ಬಗ್ಗೆ (ವಚನಗಳು 10-17ಎ)

ಅಲ್ಲಿ ಹದಿನೆಂಟು ವರುಷಗಳಿಂದ ದೆವ್ವ ಬಡಿದು ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀಯು ಇದ್ದಳು (ವಚನಗಳು 10-13).[31] ಇದು ಸಹ ಸಬ್ಬತ್ ದಿನದ ಮತ್ತೊಂದು ಗೊಂದಲ (ವಚನ 14).[32] ಈ ಹಿಂದೆ ಸಬ್ಬತ್ ದಿನದಂದು ಗುಂಡಿಯೊಳಗೆ ಬಿದ್ದ ಒಂದು ಪ್ರಾಣಿಯನ್ನು ಮೇಲೆತ್ತುವ ನಿದರ್ಶವನ್ನು ನೀಡಲಾಗಿದೆ (ಮತ್ತಾಯ 12:11, 12). ಇಂದಹದೆ ಇನ್ನೊಂದು ನಿದರ್ಶನವನ್ನು ಮುಂದುವರೆಸಲಾಗಿದೆ:

> ಕಪಟಿಗಳು, ನೀವು, ನಿಮ್ಮಲ್ಲಿ ಪ್ರತಿಯೊಬ್ಬನೂ ಸಬ್ಬತ್ ದಿನದಲ್ಲಿ ತನ್ನ ಎತ್ತನ್ನಾಗಲಿ ಕತ್ತೆಯನ್ನಾಗಲಿ ಗೋದಲಿಯಿಂದ ಬಿಚ್ಚಿ ನೀರು ಕುಡಿಸುವದಕ್ಕಾಗಿ ಹಿಡುಕೊಂಡು ಹೋಗುತ್ತಾನಲ್ಲವೇ. ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್‌ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ? (ವಚನಗಳು 15ಬಿ, 16).

ಈ ಮಾತನ್ನು ಕೇಳಿ ವಿರೋಧಿಗಳೆಲ್ಲರೂ "ನಾಚಿ ಕೊಂಡರು" (ವಚನ 17ಎ).

### ಆನಂದಗೊಂಡವರ ಬಗ್ಗೆ (ವಚನಗಳು 17ಬಿ-21)

ಕ್ರಿಸ್ತನ ವಿರೋಧಿಗಳು ಆನಂದಗೊಳ್ಳದೆ ಹೋದರು, ಗುಂಪು ಕೂಡಿದ್ದ ಜನರೆಲ್ಲಾ ಆತನಿಂದಾಗುತ್ತಿದ್ದ "ಎಲ್ಲಾ ಮಹತ್ವದ ಕಾರ್ಯಗಳಿಗೆ ಸಂತೋಷಪಟ್ಟರು" (ವಚನ 17ಬಿ). ಅವರ ಆನಂದವು ಮುಂದಿನ ಕಾರ್ಯದ ಸೂಚನೆಯಾಗಿತ್ತು. ದೇವರ ರಾಜ್ಯದ ವೃದ್ಧಿಯ ಕುರಿತು ಯೇಸು ಎರಡು ಸಾಮ್ಯಗಳನ್ನು ಹೇಳಿದನು (ವಚನಗಳು 18-21; ನೋಡಿರಿ ಮತ್ತಾಯ 13:31-33[33]).

## ಅಪನಂಬಿಕೆಯ ಕುರಿತ ಹಳೆಯ ಮತ್ತು ಹೊಸ ಉಪದೇಶ (ಲೂಕ 13:22; ಯೋಹಾನ 10:22-39)

ಆತನು ಊರೂರಿಗೂ ಗ್ರಾಮ ಗ್ರಾಮಕ್ಕೂ ಹೋಗಿ ಉಪದೇಶ ಮಾಡುತ್ತಾ ಯೆರೂಸಲೇಮಿಗೆ ಪ್ರಯಾಣ ಮಾಡುತ್ತಿದ್ದನು (ಲೂಕ 13:22). ಆತನು ಎಲ್ಲೇ ಪ್ರಯಾಣ ಮಾಡಿದರೂ, ಆತನು ಅಂತಿಮ ಗುರಿಯನ್ನು ಹೊಂದಿದ್ದನು. ಈ ಸಮಯದಲ್ಲಿಯೇ ಯೇಸು ಯೆರೂಸಲೇಮಿಗೆ ಬಂದನು. ಯೂದಾಯದ ಸೇವೆಯ ಅಂತ್ಯದಲ್ಲಿ, ಯೇಸು ಇಲ್ಲಿಗೆ ಬಂದನೆ ಅದು ಯೋಹಾನನು ದಾಖಲಿಸಿರುವನು (ಯೋಹಾನ 10:22-39).

ಯೇಸು ಯೆರೂಸಲೇಮಿನ ಪ್ರತಿಷ್ಟೆಯ ಹಬ್ಬಕ್ಕೆ ಹೋದನು (ಯೋಹಾನ 10:22). ಯೆಹೂದ್ಯರ ಹಬ್ಬಗಳಲ್ಲಿ ಪ್ರತಿಷ್ಟೆಯ ಹಬ್ಬ ಕಡೇಯದಾಗಿತ್ತು.[34] ಅದು ಮೆಕ್ಕಾಬಿಯರ

ಕಾಲದಲ್ಲಿ ಹೊಸ ಒಡಂಬಡಿಕೆಗಳ ಮಧ್ಯದಲ್ಲಿ ನೆರವೇರುತ್ತಿತ್ತು. ಅದು ದೇವಾಲಯವನ್ನು ಪ್ರತಿಷ್ಟಿಸುವ ಸಮಯವಾಯಿತು (ಕ್ರಿ.ಪೂ. 165ರಲ್ಲಿ). ಅಂತಿಯೋಕ್ಯದ ಎಪಿಫೇನನು, ದೇವಾಲಯವನ್ನು ಹಾಳು ಮಾಡಿದ್ದನು. ಈಗ ಯೆಹೂದ್ಯರು ಆ ಹಬ್ಬವನ್ನು "ಹನೂಕ" (ಚನೂಕ) ಎನ್ನುವರು. ಅದನ್ನು ಡಿಸೆಂಬರ್ ತಿಂಗಳಿನಲ್ಲಿ ಆಚರಿಸುತ್ತಾರೆ (ಯೋಹಾನ 10:23ಎ). ಯೇಸುವಿನ ಕಾಲದಲ್ಲಿ ಆ ಹಬ್ಬವನ್ನು ಏಳು ದಿವಸಗಳ[36] ಆಚರಿಸುವಾಗ, ಅನೇಕ ಜನರು ಕೂಡಿಬರುತ್ತಿದ್ದರು.

### ಅಪನಂಬಿಕೆಯ ಪದಗಳನ್ನು ಬಳಸಿದರು (ಯೋಹಾನ 10:23ಬಿ-30)

ದೇವಾಲಯದ ಪ್ರತಿಷ್ಟೆಯ ಹಬ್ಬದ ಸಮಯದಲ್ಲಿ, ಯೇಸು ದೇವಾಲಯದೊಳಗಿನ ಸೊಲೋಮೋನನ ಮಂಟಪದೊಳಗೆ ತಿರುಗಾಡುತ್ತಿದ್ದನು (ವಚನ 23ಬಿ).[37] ಅದು ಅನ್ಯರ[38] ಅಂಗಳದ ಪೂರ್ವಕ್ಕೆ ಹೊಂದಿಕೊಂಡಿತ್ತು.[39] ಆಗ ಯೆಹೂದ್ಯರು ಆತನನ್ನು ಸುತ್ತಿಕೊಂಡು ಇನ್ನು ಎಷ್ಟುಕಾಲ ನಮ್ಮಲ್ಲಿ ಅನುಮಾನ ಹುಟ್ಟಿಸುತ್ತಿ? ನೀನು ಕ್ರಿಸ್ತನಾಗಿದ್ದರೆ ಅದನ್ನು ನಮಗೆ ಸ್ಪಷ್ಟವಾಗಿ ಹೇಳು ಅಂದರು (ವಚನ 24). ಆತನು ಪರೋಕ್ಷವಾಗಿ[40] ತಾನು ಕ್ರಿಸ್ತನೆಂಬ[41] ಸೂಚನೆ ನೀಡಿದ್ದನು, ಆದರೆ ಬಹಿರಂಗ ಪಡಿಸಿರಲಿಲ್ಲ. ಅಂದರೆ ಯಾರು ಬೇಕಾದರೂ ಈ ವಿಧವಾದ ಹೇಳಿಕೆಯನ್ನು ನೀಡಬಹುದಿತ್ತು. ಆತನು ಮಾಡಿದ ಕ್ರಿಯೆಗಳೇ, ಆತನು ತಂದೆಯಿಂದ ಬಂದವನೆಂದು ರುಜುವಾತು ಪಡಿಸಿದ್ದವು (ವಚನಗಳು 25, 37, 38).[42]

ಆದರೆ ಆತನ ವಿರೋಧಿಗಳು ಆತನಲ್ಲಿ ನಂಬಿಕೆ ಇಡುವ ಸಲುವಾಗಿ ಈ ಪ್ರಶ್ನೆಗಳನ್ನು ಕೇಳಲಿಲ್ಲ. ಆತನು ದೇವದೂಷಣೆ ಮಾಡಿ, ಆತನನ್ನು ವಿಚಾರಣೆ ಮಾಡುವ ಕಾರಣದಿಂದ ಪ್ರಶ್ನಿಸುತ್ತಿದ್ದರು.[43] ಯೇಸು ಅವರಿಗೆ, "ನಾನು ಮಾಡುವ ಕ್ರಿಯೆಗಳೇ ನನಗೆ ಸಾಕ್ಷಿಯಾಗಿವೆ. ಆದರೂ ನೀವು ನನ್ನ ಕುರಿಗಳಾಗದೆ ಇರುವದರಿಂದ ನಂಬದೇ ಇದ್ದೀರಿ ಅಂದನು" (ವಚನಗಳು 25, 26).

ಇಲ್ಲಿ ಕುರಿಗಳ ಕುರಿತಾದ (ವಚನಗಳು 1-18) ವಚನ ಭಾಗವನ್ನು ಯೇಸು ನೆನಪುಮಾಡಿದ್ದಾನೆ. ತನ್ನ ತಂದೆಯು ಕುರಿಗಳ ಚಿಂತಕನು ಎಂಬ ಅಂಶವನ್ನು ತಿಳಿಸಿದ್ದಾನೆ (ವಚನಗಳು 27-29).[44] "ನಾನು ನನ್ನ ತಂದೆಯು ಒಂದೇ" (ವಚನ 30) ಅಂದನು.

### ಕ್ರಿಯೆಗಳ ಮೂಲಕ ಅಪನಂಬಿಕೆಯನ್ನು ಬಯಲು ಪಡಿಸಿದ್ದು (ಯೋಹಾನ 10:31-39)

ಯೆಹೂದ್ಯರು ಆತನನ್ನು ಹೊಡೆದು ಕೊಲ್ಲಬೇಕೆಂದು ತಿರಿಗಿ ಕಲ್ಲುಗಳನ್ನು ತೆಗೆದುಕೊಂಡು ಬಂದರು (ವಚನ 31; 8:59). ಯೆಹೂದ್ಯರು ನಾವು ನಿನ್ನ ಮೇಲೆ ಕಲ್ಲೆಸೆಯುವದು ಒಳ್ಳೆ ಕಾರ್ಯದ ದೆಸೆಯಿಂದಲ್ಲ, "ದೇವ ದೂಷಣೆಯಿಂದಲೂ; ... ನೀನು ಮನುಷ್ಯನಾಗಿದ್ದು ನಿನ್ನನ್ನೇ ನೀನು ದೇವರನ್ನಾಗಿ ಮಾಡಿಕೊಳ್ಳುವದರ ದೆಸೆಯಿಂದಲೂ ನಿನ್ನ ಮೇಲೆ ಕಲ್ಲೆಸೆಯುತ್ತೇವೆ" ಅಂದರು (10:33). ಯೇಸು ಅವರಿಗೆ "ನೀವು ದೇವರುಗಳೇ" ಎಂದು ನಾನು ಹೇಳಿದೆನು ಎಂಬುದಾಗಿ ನಿಮ್ಮ ಧರ್ಮಶಾಸ್ತ್ರದಲ್ಲಿ ಬರೆದಿದೆಯಲ್ಲಾ ಅಂದನು (ವಚನ 34; ನೋಡಿ ಕೀರ್ತನೆ 82:6).[45] ಹಾಗಾದರೆ ದೇವರ ವಾಕ್ಯಗಳನ್ನು ಹೊಂದಿದವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ ತಂದೆಯು ಪ್ರತಿಷ್ಟೆಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನು ನಾನು "ದೇವರ" ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತಿ ಅನುತ್ತೀರೋ? (ವಚನಗಳು 35,[46] 36)! ನಾನು ನನ್ನ ತಂದೆಯ ಕ್ರಿಯೆಗಳನ್ನು ಮಾಡದಿದ್ದರೆ, ನನ್ನ ಮಾತನ್ನು ನಂಬಬೇಡಿರಿ (ವಚನಗಳು 37, 38) ಎಂಬ ಸವಾಲನ್ನು ಹಾಕಿದನು.

ಕೇಳಲು ತಿರಸ್ಕರಿಸಿದಾಗ, ಅವರು ಆತನನ್ನು ಬಂಧಿಸಲು ಪ್ರಯತ್ನಿಸಿದರು (ವಚನ 39ಎ; ನೋಡಿ ಯೋಹಾನ 7:44). ಮತ್ತೆ, ಆವರ ಗ್ರಹಿಸುವಿಕೆಯನ್ನು ಅಚ್ಚರಿಗೊಳಿಸಿದರು (ವಚನ 39ಬಿ; ನೋಡಿ ಯೋಹಾನ 8:59).

# ಕ್ರಿಸ್ತನ ಚಿಂತನೆಯ ಕುರಿತ ಹಳೆಯ ಹಾಗೂ ಹೊಸ ಉಪದೇಶಗಳು (ಮತ್ತಾಯ 19:1, 2; ಮಾರ್ಕ 10:1; ಲೂಕ 13:23-35; ಯೋಹಾನ 10:40-42)

ಯೆರೂಸಲೇಮು ಮತ್ತೊಂದು ಬಾರಿ ಯೇಸುವಿಗೆ ಬಾಗಿಲನ್ನು ಮುಚ್ಚಿಕೊಂಡಿತು. ಆತನು ಅಲ್ಲಿ ವರ್ತಮಾನದ ಕಾರ್ಯವನ್ನು ಮಾಡಿದ್ದನು.[47] ಆತನು ಮತ್ತು ಆತನ ಶಿಷ್ಯರು ಯೊರದಯಾಯನ್ನು ಬಿಟ್ಟು, ಮೂರು ವರ್ಷಗಳ ಹಿಂದೆ ದೀಕ್ಷಾಸ್ನಾನ ಮಾಡಿಸುತ್ತಿದ್ದ ಸ್ಥಳಕ್ಕೆ ಪ್ರಯಯಾಣ ಮಾಡಿದರು: "ಆಮೇಲೆ ಆತನು ಯೋರ್ದೋರ್ನ್ ಹೋಳೆಯ ಆಚೆ ಯೋಹಾನನು ಮೊದಲು ದೀಕ್ಷಾಸ್ನಾನ ಮಾಡಿಸುತ್ತಿದ್ದ ಸ್ಥಳಕ್ಕೆ ತಿರುಗಿ ಹೋಗಿ ಅಲ್ಲಿದ್ದನು" (ಯೋಹಾನ 10:40ಎ). ಪೆರಿಯ ಎಂಬುದು ಆ ಸ್ಥಳದ ಹೆಸರು.[48]

ಪೆರಿಯ ಎಂಬುದು ಯೆಹೂದ್ಯರಿಗೆ ಸೇರಿದ್ದ ಸ್ಥಳವಾಗಿತ್ತು. ಅಲ್ಲಿದ್ದವರು ಅದೇ ಧರ್ಮದವರಾಗಿದ್ದು, ಗಲಿಲಾಯ ಹಾಗೂ ಯೊದಾಯದ ನಿಯಮಗಳನ್ನು ಹೊಂದಿದ್ದರು ಆದರೆ ನದಿಯ ಬಳಿ ಇದ್ದ ಪಶ್ಚಿಮದ ಯೆಹೂದ್ಯರಿಗೆ ಈ ಸ್ಥಳ ಅಷ್ಟು ಪ್ರಮುಖವಾಗಿರಲಿಲ್ಲ. ಆದರೆ ಕ್ರಿಸ್ತನಿಗೆ ಈ ಹೇಳಿಕೆ ಸಮಂಜಸವಾಗಿರದೆ, ಪೆರಿಯದವರಿಗೂ ರಕ್ಷಣೆಯ ಅಗತ್ಯವಿತ್ತು, ನಂತರದ 3½ ತಿಂಗಳು ಯೇಸು ಆ ಸ್ಥಳದಲ್ಲಿ ಕಳೆದನು.[49]

ಹೊಸ ಸ್ಥಳದ ಯಶಸ್ವಿಯಲ್ಲಿ ಆತನು ಆನಂದಿಸಿದನು. ಬಹು ಜನರು ಆತನ ಹಿಂದೆ "ಗುಂಪು ಗುಂಪಾಗಿ ಹೋದರು" (ಮತ್ತಾಯ 19:2). ಅಲ್ಲಿ ಬೋಧಿಸಿದನು (ಮಾರ್ಕ 10:1) ಗುಣಪಡಿಸಿದನು (ಮತ್ತಾಯ 19:2) ದೆವ್ವಗಳನ್ನು ಬಿಡಿಸಿದನು (ಲೂಕ 13:32). "ಅನೇಕರು ಆತನ ಬಳಿಗೆ ಬಂದು - ಯೋಹಾನನು ಒಂದು ಸೂಚಕ ಕಾರ್ಯವನ್ನೂ ಮಾಡಲಿಲ್ಲ; ಆದರೆ ಐತನ ವಿಷಯವಾಗಿ ಯೋಹಾನನು ಹೇಳಿದ್ದೆಲ್ಲಾ ನಿಜವಾಗಿತ್ತು ಎಂದು ಮಾತಾಡುತ್ತಿದ್ದರು. ಅಲ್ಲಿ ಅನೇಕರು ಆತನನ್ನು ನಂಬಿದರು" (ಯೋಹಾನ 10:41, 42).[50]

ಪೆರಿಯ ಸೇವೆಯ ಎರಡು ಅಂಶಗಳನ್ನು ತಿಳಿಸುತ್ತೇನೆ: ಯೇಸುವಿನಿಂದ ಒಂದು ಎಚ್ಚರ ಹಾಗೂ ಆತನಿಗೂ ಒಂದು ಎಚ್ಚರ ಉಂಟಾಯಿತು.

## ಯೇಸುವಿನಿಂದ ಒಂದು ಎಚ್ಚರ (ಲೂಕ 13:23-30)

ಒಂದು ದಿನ ಕ್ರಿಸ್ತನು ಬೋಧಿಸುವಾಗ, "ಒಬ್ಬನು, ಸ್ವಾಮಿ, ರಕ್ಷಣೆ ಹೊಂದುವದು ಸ್ವಲ್ಪ ಜನರು?" ಎಂದು ಕೇಳಿದನು (ಲೂಕ 13:23ಎ). ಅಂದರೆ ಆತನು ಈ ಹಿಂದೆ ನೀಡಿದ್ದ, ಸಂದೇಶದಂತೆ ಮಾನಸಾಂತರ ಪಡದವರು ನಾಶವಾಗುವರು ಎಂಬುದಕ್ಕೆ ಪ್ರತಿಕ್ರಿಯೆ ಇರಬಹುದು (ಲೂಕ 13:1-5). "ಪರ್ವತ ಪ್ರಸಂಗದಲ್ಲಿ ಯೇಸು ಕೆಲವೇ ಜನರು ರಕ್ಷಿಸಲ್ಪಡುವರು" ಎಂದು ಬೋಧಿಸಿದ್ದನು (ಮತ್ತಾಯ 7:13, 14). ಈಗ ಆತನು ಯಾರು ರಕ್ಷಿಸಲ್ಪಡುವರು ಮತ್ತು ಯಾರು ರಕ್ಷಣೆ ಹೊಂದುವದಿಲ್ಲ ಎಂಬ ಸಂಗತಿಯನ್ನು ತಿಳಿಸುತ್ತಿದ್ದನು:

- ರಕ್ಷಣಾ ಮಾರ್ಗವು ಕಠಿಣ ಹಾಗೂ ಬಿಕ್ಕಟ್ಟಿನ ಹಾದಿಯಾಗಿತ್ತು (ಲೂಕ 13:24; ಮತ್ತಾಯ 7:13, 14ಕ್ಕೆ ಹೋಲಿಸಿ).
- ರಕ್ಷಿಸಲ್ಪಡುವೆವು ಅನ್ನುವವರು ಅದನ್ನು ಹೊಂದಲಾರರು (ಲೂಕ 13:25-27; ಮತ್ತಾಯ 7:21-23ಕ್ಕೆ ಹೋಲಿಸಿ).
- ಅನ್ಯರಿಗೆ ರಕ್ಷಣೆ ದೊರಕದು ಎಂದು ಯೆಹೂದ್ಯರು ಭಾವಿಸಿದರೂ, ಅನ್ಯರು ರಕ್ಷಣೆ ಹೊಂದುವರು (ಲೂಕ 13:28-30; ಮತ್ತಾಯ 8:11, 12 ಹೋಲಿಸಿ).

ಎಷ್ಟು ಜನರು ರಕ್ಷಿಸಲ್ಪಡುತ್ತಾರೆ ಎಂಬುದು ಪ್ರಮುಖ ಅಂಶವಾಗಿರದೆ, ಪ್ರಶ್ನೆ ಕೇಳಿದಂತ ವ್ಯಕ್ತಿ ಆ ಗುಂಪಿಗೆ ಸೇರಿದ್ದಾನೋ ಎಂಬುದು ಪ್ರಮುಖವಾಗಿದೆ.

### ಯೇಸುವಿಗೆ ಒಂದು ಎಚ್ಚರ (ಲೂಕ 13:31-35)

ಅದೇ ಗಳಿಗೆಯಲ್ಲಿ ಕೆಲವು ಮಂದಿ ಫರಿಸಾಯರು ಹತ್ತಿರ ಬಂದು ಆತನಿಗೆ ನೀನು ಇಲ್ಲಿಂದ "ಹೊರಟು ಹೋಗು ಹೆರೋದನು ನಿನ್ನನ್ನು ಕೊಲ್ಲಬೇಕೆಂದಿದ್ದಾನೆ" (ವಚನ 31) ಅಂದರು. ಅವರು ತಿಳಿಸಿದ ಅಪಾಯ ಸತ್ಯವಾಗಿತ್ತು. ಹೆರೋದನು ಗಲಿಲಾಯದವನಾದ್ದರಿಂದ, ಪೆರಿಯವನ್ನು ಆಳುತ್ತಿದ್ದನು. ಸ್ನಾನಿಕನಾದ ಯೋಹಾನನು ಸಹ ಪೆರಿಯದಲ್ಲಿ ವಿಚಾರಣೆಗೊಳಗಾಗಿ, ಮರಣ ಅನುಭವಿಸಿದ್ದನು, ಈ ಹಿಂದೆ ತಿಳಿಸಿರುವ ಹಾಗೆ, ಅವನು ಯೇಸುವಿನ ಬಗ್ಗೆ ಉತ್ತಮವಲ್ಲದ ಆಸಕ್ತಿಯನ್ನು ಹೊಂದಿ ಆತನನ್ನು ಹುಡುಕುತ್ತಿದ್ದನು (ನೋಡಿ ಮಾರ್ಕ 6:14; ಲೂಕ 9:9; 23:8).

ಈ ಕುರಿತು ಫರಿಸಾಯನು ಏಕೆ ಎಚ್ಚರನೀಡಿದನು ಎಂಬುದು ಸ್ಪಷ್ಟವಿರುವದಿಲ್ಲ. ಒಂದು ವೇಳೆ ಅವರು ಆತನ ಬಗ್ಗೆ ಕಾಳಜಿ ವಹಿಸಿರಬಹುದು. ಅವರು ಒಂದು ವೇಳೆ ಪೆರಿಯದವರೇ ಆಗಿದ್ದರೆ, ಯೇಸು ಅಲ್ಲಿ ಗೊಂದಲವನ್ನು ಸೃಷ್ಟಿಸುವ ಮೊದಲೇ ಆತನು ಆ ಸ್ಥಳವನ್ನು ಬಿಡಬೇಕೆಂದು ಬಯಸಿರಬಹುದು. ಅವರು ಎಲ್ಲಿಯವರೇ ಆಗಿದ್ದರೂ, ಆತನು ಯೂದಾಯಕ್ಕೆ ಹಿಂದಿರುಗಬೇಕೆಂದು ಬಯಸಿದರು, ಯಾಕೆಂದರೆ ಅಲ್ಲಿ ಹಿರಿ ಸಭೆಯವರು ಹೆಚ್ಚಿನ ಅಧಿಕಾರ ಹೊಂದಿದ್ದರು.

ಹೆರೋದನ ಬಗ್ಗೆ  ಯೇಸುವಿಗೆ ಆಸಕ್ತಿಯಿರಲಿಲ್ಲ ಎಂಬುದು ಅವರು ಕೊಟ್ಟ ಉತ್ತರವು ಸುಚಿಸುತ್ತದೆ, ಆದರೆ ಅವರು ಹೇಳಿದ ಉತ್ತರವು ಫರಿಸಾಯರನ್ನು ಗಾಬರಿಪಡಿಸಿತು. "ಹೋಗಿ ಆ ನರಿಗೆ ಹೇಳಿರಿ,[51] 'ನಾನು ಈ ಹೊತ್ತು ನಾಳೆ ದೆವ್ವಗಳನ್ನು ಬಿಡಿಸುತ್ತಾ ರೋಗಗಳನ್ನು ವಾಸಿಮಾಡುತ್ತಾ, ಇದ್ದು ಮೂರನೆಯ ದಿನದಲ್ಲಿ ಸಿದ್ಧಿಗೆ ಬರುತ್ತೇನೆ' ಅಂದನು[52]" (ವಚನ 32). ಆತನು ಮುಂದುವರೆಸಿ, "ಹೇಗೂ ನಾನು ಈ ಹೊತ್ತು ನಾಳೆ ನಾಡಿದ್ದು ಸಂಚಾರ ಮಾಡಬೇಕು" ಅಂದನು (ವಚನ 33ಎ). ಅಂದರೆ "ನನಗೆ ಮಾಡಲು ಕೆಲಸವಿದೆ, ನಾನು ಅದನ್ನು ಪೂರ್ಣ ಮಾಡಬೇಕು" ಹೆರೋದನು ಹೇಳುವ ಅಥವಾ ಮಾಡುವ ಸಂಗತಿಗೆ ನಾನು ಬೆಲೆ ನೀಡುವವನಲ್ಲ ಎಂಬ ಪರೋಕ್ಷ ಮಾತಾಗಿದೆ. ನಂತರ ಆತನು ಪ್ರವಾದಿಯಾದವನು ಯೆರೂಸಲೇಮಿನಲ್ಲಿಯೇ ಹೊರತು ಬೇರೆ ಪಟ್ಟಣದಲ್ಲಿ ಕೊಲ್ಲಲ್ಪಡುವಷ್ಟೆ ಅಂದನು (ವಚನ 33ಬಿ). ಇದರ ಅರ್ಥವೇನೆಂದರೆ, ಹೆರೋದನು ನನ್ನನ್ನು ಪೆರಿಯದಲ್ಲಿ ಕೊಲ್ಲುವನು ಎಂದು ಚಿಂತಿಸಬೇಡಿರಿ, ಯಾಕಂದರೆ ನಾನು ಯೆರೂಸಲೇಮಿನಲ್ಲೆ ಮರಣ ಹೊಂದಬೇಕೆಂದು ನೇಮಕವಾಗಿದೆ. ಯೆರೂಸಲೇಮಿನಲ್ಲೇ ಅನೇಕರು ಮರಣಕ್ಕೀಡಾಗಿದ್ದರು ಎಂದು ಹೇಳಿ ಯರುಸಲೇಮಿನ ಕುರಿತಾಗಿ ಅತ್ತನು (ವಚನಗಳು 34, 35).[53]

## ಮುಕ್ತಾಯ

ಪುರಾತನ ವಸ್ತು ಸಂಗ್ರಹಕಾರರು, ಹಳೆಯ ವಸ್ತುಗಳನ್ನು ಇಷ್ಟ ಪಡುತ್ತಾರೆ ಈ ದಿವಸಗಳಲ್ಲಿ ತಯಾರಾಗುವ ವಸ್ತುಗಳು ಹೆಚ್ಚು ಕಾಲ ಬಾಳಿಕೆ ಬರುವದಿಲ್ಲ ಇನ್ನೂ ಕೆಲವರು ನೂತನ ವಸ್ತುಗಳನ್ನು ಬಯಸುತ್ತಾರೆ. "ಹೊಸದಾಗಿದ್ದರೆ ಅದು ಉತ್ತಮವಾಗಿರುತ್ತದೆ" ಎನ್ನುತ್ತಾರೆ ಹಳೆಯ ಮತ್ತು ಹೊಸ ವಸ್ತುಗಳು ತಮ್ಮದೆ ಆದ ಸ್ಥಾನವನ್ನು ಪಡೆದಿರುತ್ತವೆ, ಉದಾಹರಣೆ "ನಾನು ಚಿಕಿತ್ಸೆಗಾಗಿ ವೈದ್ಯರ ಬಳಿ ಹೊಗುವಾಗ ನೂತನ ಮಾದರಿಯ ಉಪಕರಣಗಳಿಂದ ನನ್ನನ್ನು ಪರೀಕ್ಷಿಸಿ" ಎಂದು ಹೇಳುತ್ತೇನೆ ಅದೇ ಸಂದರ್ಭದಲ್ಲಿ ಹಳೇ ಕಾಲದ ಚಿಂತನೆಯನ್ನು ನನ್ನ ಬಗ್ಗೆ ತುಲಿಸಿರಿ ಎಂದು ಸಹ ಹೇಳುತ್ತೇನೆ ಈ ಪಾಠದಲ್ಲಿ ಯೇಸು ಹಳೆಯ ಸಂಗಂತಿಗಳನ್ನು ಅದರಲ್ಲಿರುವ ಹೊಸ ಸತ್ಯಗಳನ್ನು ಪ್ರಕಟಿಸಿದ್ದಾನೆ. ವಾಕ್ಯವು ಹಳೆಯದಾದಾರೂ, ಅದು ಹೊಸದೇ ಅಗಿರುತ್ತದೆ, ಇದು ವಾಕ್ಯದಲ್ಲಿರುವ ಅಶ್ಚರ್ಯ ವಾಗಿದೆ.

## ಮಾಹಿತಿ

ಈ ವಾಕ್ಯ ಭಾಗವು ಅನೇಕ ಪ್ರಸಂಗಗಳನ್ನು ಒಳಗೊಂಡಿದೆ "ನಾನೇ ಎಂದಿಗೂ ಸೋಲ ಬಾರದು" ಎಂಬ ತಾಪ್ಪರ್ಯವನ್ನು ಬೊಗದ ಕುರಿತ ಬೊಧನೆಯಲ್ಲಿ ತಿಳಿಸಲಾಗಿದೆ (ಲೂಕ 12:13-34). ಮಾನಸಾಂತರದ ಕುರಿತ ಪ್ರಸಂಗಕ್ಕಿಂತ ಹೆಚ್ಚಿನ ಸಂಗತಿಯ ಅಗತ್ಯವಿಲ್ಲ (ಲೂಕ 13:1-5). ಫಲಭರಿತವಾದ ಕ್ರೈಸ್ತ ಜೀವನ ಶೈಲಿಗೆ ಫಲ ಬಿಳದದ ಅಂಜೂರಿ ಮರದ ದೃಷ್ಟಾಂತವನ್ನು ಬಳಸಿರಿ (ಲೂಕ 13:6-9).

ಟಿಪ್ಪಣಿಗಳು

[1]ಯೇಸುವಿನ ಬೋಧನೆಗಳ ಕುರಿತು ಕೆಲವರು ಗೊಂದಲಕ್ಕೊಳಗಾಗಿದ್ದಾರೆ ಯೇಸು ಒಂದೇ ಬೋಧನೆಯನ್ನು ಎರಡು ಸಾರಿ ಹೇಳಲಾರನು ಎನ್ನುತ್ತಾರೆ. ಅದಾಗ್ಯೂ ತಾವುಗಳೇ ತಮ್ಮ ಬೋಧನೆಯನ್ನು ಪುನರಾವರ್ತಿಸುತ್ತಾರೆ. ದೇವರು ಸಹ ದಶಾಜ್ಞೆಗಳನ್ನು ಪುನಃ ತಿಳಿಸಿದ್ದಾನೆ (ವಿಮೋಚನಕಾಂಡ 20; ಧರ್ಮೋಪದೇಶಕಾಂಡ 5). ತಂದೆಯು ಮಾಡಿದ್ದರೆ, ಮಗನೇಕೆ ಮಾಡಬಾರದು. [2]*ಕ್ರಿಸ್ತನ ಜೀವನ ಚರಿತ್ರೆ, 3ರಲ್ಲಿ* "ಸಾಮ್ಯರೂಪವಾಗಿ ಅನೇಕ ಸಂಗತಿಗಳನ್ನು ಮಾತಾಡಿದನು" ಎಂಬ ಪಾಠದಲ್ಲಿ ಚರ್ಚಿಸಲಾಗಿದೆ. [3]" 'ಜೀವನ' ಎಂಬುದಕ್ಕೆ ನಾವುಗಳು ಒಂದು ಪದವನ್ನು ಹೊಂದಿದ್ದರೆ, ಗ್ರೀಕ್‌ನಲ್ಲಿ ಎರಡು ಪದಗಳಿವೆ - ಒಂದು [*bios*] *ನಾವು ಜೀವಿಸುವಂತ ಜೀವನವನ್ನು* ತಿಳಿಸುತ್ತದೆ, ಎರಡನೆಯದು [*zoa*] ಎಂಬುದು ನಮ್ಮನ್ನು ಜೀವಂತವಿರಿಸುವ ಜೀವವನ್ನು ತಿಳಿಸುತ್ತದೆ; ಕ್ರಿಸ್ತನು ಎರಡನೇಯದ ಕುರಿತು ಮಾತಾಡಿದರು" (Richard C. Trench, *Notes on the Parables of Our Lord* [Westwood, N.J.; Fleming H. Revell Co., 1953], 338; emphasis his). [4]W. E. Vine, "*pleonexia*," *The Expanded Vine's Expository Dictionary of New Testament Words*, ed. John R. Kohlenberger III with James A. Swanson (Minneapolis: Bethany House Publishers, 1984), 245. [5]"ಯಶಸ್ವಿ ವ್ಯಾಪಾರಸ್ಥನ ಕೆಲವು ತಪ್ಪುಗಳು" ಎಂಬ ಪಾಠವನ್ನು ನೋಡಿ. [6]ಲೂಕ 6ರ ಬಹುಪಾಲು ಸಂದೇಶವನ್ನು ಲೂಕನು ತಿಳಿಸಿದ್ದರೂ, ಕೆಲವು ಭಾಗಗಳನ್ನು ಕ್ರಿಸ್ತನು ತದನಂತರ ವಿವರಿಸಿದಾಗ ಅದನ್ನು ದಾಖಲು ಮಾಡಿದನು (ಲೂಕ 12:22-31ನ್ನು ಮತ್ತಾಯ 6:25-34ಕ್ಕೆ ಹೋಲಿಸಿರಿ; ಲೂಕ 12:33, 34ನ್ನು ಮತ್ತಾಯ 6:19-21ಕ್ಕೆ ಹೋಲಿಸಿ). [7]ದೇವರು ಅವರಿಗೆ ಒಂದು ಸ್ಥಾಪಿತಗೊಂಡ ರಾಜ್ಯವನ್ನು ನೀಡಿದನು. ತನ್ನ ಮರಣ ಪುನರುತ್ಥಾನದ ನಂತರ, ಸಭೆಯನ್ನು ಅವರಿಗೆ ನೀಡಿದನು (ಅಪೊಸ್ತಲರ ಕೃತ್ಯಗಳು 2). [8]1 ತಿಮೊಥೆ 6:17-19 ನೋಡಿರಿ. ನಂತರ ಯೇಸು ಇದನ್ನು ಐಶ್ವರ್ಯವಂತನಿಗೆ ನೀಡಿದನು (ನೋಡಿ ಮತ್ತಾಯ 19:21). [9]ಇದನ್ನು Augustine by Trench, 341ರಿಂದ ಆರಿಸಿಕೊಳ್ಳಲಾಗಿದೆ. [10]ನೋಡಿ KJV.

[11]Neil R. Lightfoot, *The Parables of Jesus*, Part 1 (Austin, Tex.: R. B. Sweet, Co., 1963), 74. [12]ಯೇಸುವಿನ ಬರೋಣದ ಕುರಿತು ಎರಡನೆಯ ಸಾರಿ ತಿಳಿಸಿದನು ಮತ್ತಾಯ 16:27 ಮೊದಲನೆಯ ಸಾರಿ. [13]"ಸಾಮ್ಯ" ಎಂಬ ಪದವನ್ನು ಪೇತ್ರನ ಹೊರತು, ಯೇಸು ಬಳಸಲಿಲ್ಲ (ಲೂಕ 12:41). ಹೊಸ ಒಡಂಬಡಿಕೆ ಕೆಲವು ಸಾರಿ "ಸಾಮ್ಯ" ಎಂಬುದನ್ನು ದೃಷ್ಟಾಂತ ಎಂಬ ಅರ್ಥದಲ್ಲಿ ಉಪಯೋಗಿಸಿರುವದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. [14]ಮತ್ತಾಯ 24:43, "ಕಳ್ಳನು ಬರುವಂತೆ" ಎಂಬ ದೃಷ್ಟಾಂತ ಕರ್ತನು ಬರುವ ಸಮಯವನ್ನು ನಿಗದಿ ಪಡಿಸುವವರಿಗೆ ಇದು ಪಾಠವಾಗಿದೆ. [15]ದೀಪ ಮತ್ತು ಮದುವೆಯ ಔತಣದ ದೃಷ್ಟಾಂತ ಒಂದೇ ಅರ್ಥವನ್ನು ಹೊಂದಿದೆ (ಮತ್ತಾಯ 25:1-13). [16]ಯೇಸು ತನ್ನ ಅಂತಿಮ ಸೇವೆಯಲ್ಲಿಯೂ ಬಳಸಿದನು (ಮತ್ತಾಯ 24:45-51). [17]ಲೂಕ 12:46ರ ಪ್ರಕಾರ, "ಅಪನಂಬಿಗಸ್ತನನ್ನು ಕತ್ತರಿಸುವನು" ಎಂದಿದೆ. ಮನುಷ್ಯನ ದೇಹ ಅಕ್ಷರಶಃ ಕತ್ತರಿಸಲಾಗುತ್ತದೆ ಎಂಬ ಅರ್ಥವಲ್ಲ. (ಈ ವಾಕ್ಯದಲ್ಲಿರುವ ವಚನವು ಉದ್ದೆಯಲ್ಲಿ ಕೆಳಗಿನ ದರ್ಜೆಗೆ ಇಳಿಸುವುದನ್ನು ಹೇಳುತ್ತದೆ, ಅದು ಅಂಗಹೀನರಾಗಿ ಮಾಡಿದರೆ ಸಾಧ್ಯವಿಲ್ಲ) ಅನೇಕ ಏಟುಗಳನ್ನು ಹೊಂದುವನಷ್ಟೆ (ನೋಡಿ ವಚನ 47), "ಆತನ [ಬೆನ್ನನ್ನು] ಚೂರುಮಾಡುವದು." [18]ಲೂಕ 12:47, 48ರ ಪ್ರಕಾರ ಅಲಕ್ಷಕ್ಕೆ ಬೆಲೆ ಇದೆ ಎಂಬುದು ಸತ್ಯಕ್ಕೆ ದೂರವಾಗಿದೆ (ಯೋಹಾನ 8:32; ಅಪೊಸ್ತಲರ ಕೃತ್ಯಗಳು 17:30). [19]ನಿನಗೆ ಆಶೀರ್ವಾದದ ಸಂಗಡ ಜವಾಬ್ದಾರಿಯೂ ಬರುತ್ತದೆ. [20]ನೋಡಿ ಮಾರ್ಕ 10:38, 39. "ದೀಕ್ಷಾಸ್ನಾನ" ಅಂದರೆ "ಮುಳುಗಿಸು" ಎಂಬ ಅರ್ಥ. ಅಲಂಕಾರಿಕವಾಗಿ "ದೀಕ್ಷಾಸ್ನಾನ" ಮುಳುಗಿದನು ಎಂದು ಉಪಯೋಗಿಸಲಾಗಿದೆ. ಶಿಲುಬೆಯಲ್ಲಿ

ಯೇಸು ವೇದನೆಯಿಂದ ಮುಳುಗಿದನು.

[21]A. T. Robertson, *Epochs in the Life of Jesus* (London: Hodder and Stoughton, n.d.), 127; quoted in Robert Duncan Culver, *The Life of Christ* (Grand Rapids, Mich.: Baker Book House, 1976), 179. [22]ಸಮಾಧಾನ ಕುರಿತ ವಾಕ್ಯಗಳು ಮತ್ತಾಯ 5:9; ರೋಮಾಪುರ 12:18; 14:19; 1 ಥೆಸಲೋನಿಕ 5:13; ಯಾಕೋಬ 3:17; 1 ಪೇತ್ರ 3:11. [23]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ "ನಮ್ಮ ಎರಡು ಕುಟುಂಬಗಳು" ಎಂಬ ಪಾಠವನ್ನು ನೋಡಿರಿ. [24]ಯೇಸು ಇದ್ದ ಸ್ಥಳಕ್ಕೆ ಆ ಸುದ್ದಿ ತಲುಪಿರಬಹುದು. ಕೆಲವರು ನಿತ್ಯವಾದದ್ದನು ಬಯಸದೆ, ತಾತ್ಕಾಲಿಕವಾದದ್ದನ್ನು ಬಯಸುತ್ತಾರೆ, ಅವರ ಕುತಂತ್ರವನ್ನು ಪಿಲಾತನು ಗ್ರಹಿಸಿರಬಹುದು. [25]ಸಿಲೋವದ ಗೋಪುರ, ಸಿಲೋವ ಕೊಳದ ಬಳಿ ಇರಬಹುದು ಅದರ ಕುರಿತು ದಾಖಲಿಗಳಿರುವದಿಲ್ಲ. [26]ಯೋಹಾನ 9:2ರಲ್ಲಿ ಇದೇ ವಿಧವಾದ ಪ್ರಶ್ನೆ ಉದ್ಭವಿಸಿದೆ. [27]ಅಂಜೂರ ಗಿಡ ಫಲ ನೀಡಲು ಮೂರು ವರ್ಷ ಕಾಲ ಅಗತ್ಯವಿರಬಹುದು. [28]ಒಂದು ವರ್ಷ ಎಂಬುದನ್ನು ಅಕ್ಷರಶಃ ಪರಿಗಣಿಸಿದರೆ, ಯೇಸುವಿನ ಅಂತ್ಯಕಾಲದ ಹಾಗೂ ಆದಿ ಸಭೆಯ ಸೇವೆಯ ಆದಿ ಸಮಯಗಳಿರಬಹುದು. [29]ಕ್ರಿ.ಶ. 70ರಲ್ಲಿ ರೋಮಾಯರು ಯೆರೂಸಲೇಮನ್ನು ನಾಶಮಾಡಿದ ಕಾರಣ. ಯೆಹೂದ್ಯರು ಕ್ರಿಸ್ತನನ್ನು ಅಲಕ್ಷಿಸಿದ ಕಾರಣ, ಕ್ರಿಸ್ತನ ಮನಸ್ಸಿನಲ್ಲಿ ಮುಂದೆ ಬರುವ ಈ ನಾಶನದ ಆಲೋಚನೆಯಿರಬಹುದು (ನೋಡಿ ಲೂಕ 12:34, 35). [30]ಪ್ರತಿಯೊಬ್ಬರು ಫಲನೀಡಬೇಕೆಂದು ದೇವರು ಬಯಸುತ್ತಾನೆ (ಮತ್ತಾಯ 7:20; ರೋಮಾಪುರ 7:4; ಗಲಾತ್ಯ 5:22, 23; ಫಿಲಿಪ್ಪಿ 1:11; ತೀತ 3:14).

[31]ಆಕೆಗೆ ಬೆನ್ನು ಉರಿ ಸಮಸ್ಯೆ ಇರಬಹುದು. ವಾಕ್ಯವು ಸ್ತ್ರೀಯು "ದೌರ್ಬಲ್ಯ ಆತ್ಮವನ್ನು" ಹೋದಿದ್ದಳು ಎಂದು ಹೇಳುತ್ತದೆ (ವಚನ 11 ಗ್ರೀಕ್‌ನಲ್ಲಿ ಅಕ್ಷರಶಃವಾಗಿದೆ; ನೋಡಿ KJV), ಮತ್ತು ಯೇಸು ಆಕೆಯು ಸೈತಾನನಿಂದ "ಬಂಧಿಸಲ್ಪಟ್ಟು" ಎಂದು ಸೂಚಿಸಿದನು (ವಚನ 16). ಅವಳು ದೆವ್ವಹಿತವಳಾದ್ದರಿಂದ ಬಾಧಿಸಲ್ಪಟ್ಟಳು ಎಂಬ ಎರ್ಥ; ಭಾದೆ ಮತ್ತು ಯೇಸು ಆಕೆಯನ್ನು ದೈಹೀಕವಾಗಿ ಗುಣಪಡಿಸಿದ್ದು ದೈಹೀಕ ಅವ್ಯವಸ್ಥೆಯನ್ನು ತೋರಿಸುತ್ತದೆ ಪೌಲನ "ದೇಹದ ಶೂಲವನ್ನು" "ಸೈತಾನನ ಸಂದೇಶಕ" ಎಂದು ಕರೆಯಲಾಗಿದೆ (2 ಕೊರಿಂಥ 12:7), ಆದರೆ ಅವನು ದೆವ್ವ ಪೀಡಿತನಾಗಿರಲಿಲ್ಲ. [32]ಇದು ಐದನೆಯ ಗೊಂದಲ. ಮೊದಲ ಮೂರನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ "ಕೂಡಿಕೊಳ್ಳುತ್ತಿರುವ ಬೀರುಗಾಳಿ" ಎಂಬ ಪಾಠದಲ್ಲಿ ಚರ್ಚಿಸಿದೆ. ಯೋಹಾನ 9ರ ಕುರುಡನ ಸ್ವಸ್ಥತೆ ನಾಲ್ಕನೆಯದಾಗಿದೆ. [33]ವೈರಿಗಳ ಪ್ರಭಾವಕ್ಕೆ ಒಳಗಾಗಬಾರದೆಂದು ಯೇಸು ಲೂಕ 13:18-21ರ ಸಾಮ್ಯವನ್ನು ಹೇಳಿರುವನು. [34]*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ "ಯೆಹೂದ್ಯರ ಹಬ್ಬಗಳು" ಎಂಬ ಚಿತ್ರಪಟವನ್ನು ನೋಡಿ. [35]ಪುನಃ ಪ್ರತಿಸ್ಥಾಪನೆ (2 ಮೆಕ್ಕ ಬೇಸ 10:5). [36]ಯೆಹೂದ್ಯರ ಗ್ರಂಥಪ್ರಕಾರ ಒಂದು ದಿವಸದ ಎಣ್ಣೆ ಎಂದರೆ, ಒಂದು ವಾರಕ್ಕಾಗುವಷ್ಟು. ಈಗ ಅದನ್ನು "ಬೆಳಕಿನ ಹಬ್ಬ" ಎನ್ನುವರು. [37]ಪೇತ್ರನ ಇಲ್ಲಿ ಎರಡನೇ ಪ್ರಸಂಗವನ್ನು ಬೋಧಿಸಿದನು (ಅಪೊಸ್ತಲರ ಕೃತ್ಯಗಳು 3:11). ಕ್ರೈಸ್ತರು ಯೆರೂಸಲೇಮಿನಲ್ಲಿ ಸೇರಿ ಬಂದ ಸಮಯ (ನೋಡಿ ಅಪೊಸ್ತಲರ ಕೃತ್ಯಗಳು 5:12). ಸೋಲೋಮೋನನ ಹಳೆಯ ಕಟ್ಟಡದಲ್ಲಿ ಉಳದಿದ್ದ ಗೋಡೆ (ಅಪೊಸ್ತಲರ ಕೃತ್ಯಗಳು 3:11; "ಸೋಲೋಮೋನನ ಮಂಟಪ"). [38]*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೀಡಿರುವ ದೇವಾಲಯ ನಕ್ಷೆಯನ್ನು ನೋಡಿರಿ. [39]ಯೆಹೂದ್ಯರು ಅಂದರೆ ಯೆಹೂದ್ಯ ನಾಯಕರು (ಯೋಹಾನ 10:24). [40]"ಮನುಷ್ಯ ಕುಮಾರನು" ಎಂಬದು ದಾನಿಯೇಲನ ಹೇಳಿದ "ಮೆಸ್ಸೀಯ" ಎಂಬ ಹೇಳಿಕೆ (ಮತ್ತಾಯ 8:20; 9:6; 10:23; 12:8). ಆತನನ್ನು ಕ್ರಿಸ್ತನು/ದೈವೀಕ/ದೇವರ ಮಗನು ಎಂದು ಅರ್ಥ ಮಾಡಲು ಯಾವುದೇ ಅಭ್ಯಾಂತರವಿರಲಿಲ್ಲ. ಆದಾಗ್ಯೂ ಆತನನ್ನು ಕೊಲ್ಲಲು ಆಶಿಸಿದನು (ನೋಡಿ ಯೋಹಾನ 5:18). ಆದರೆ ಕ್ರಿಸ್ತನು ತಾನೇ ಕ್ರಿಸ್ತನು ಎಂಬುದನ್ನು "ಸಾಮಾನ್ಯವಾಗಿ" ಮತ್ತು ಬಹಿರಂಗವಾಗಿ ಹೇಳಬೇಕೆಂದು ಒತ್ತಾಯಿಸಿದರು. ಕ್ರಿಸ್ತನನ್ನು ಮರಣಕ್ಕೆ ಒಪ್ಪಿಸುವುದಕ್ಕಾಗಿ ಒತ್ತಾಯಿಸಿದರು.

[41]*ವ್ಯಯಕ್ತಿಕವಾಗಿ* ತಾನೇ ಕ್ರಿಸ್ತನು ಎಂದು ಒಪ್ಪಿದನು (ಮತ್ತಾಯ 16:16, 17, 20). ನಾವು ಸಹ ಅದನ್ನೇ ಹೇಳಿದ್ದೇವೆ. ಮಾರ್ಕ 9:41; ಲೂಕ 2:11, 26; ಯೋಹಾನ 1:41; 4:25, 29; 9:22. [42]ಪರೋಕ್ಷ ಹೇಳಿಕೆಯು ಗೊಂದಲವನ್ನು ನಿಲ್ಲಿಸಿತ್ತು. [43]ಆತನನ್ನು ಒತ್ತಾಯ ಪೂರ್ವಕವಾಗಿ ಒಪ್ಪುವಂತೆ ಮಾಡಿ, ದೇವದೂಷಣೆ ಮಾಡಿದನು ಎಂಬ ಆರೋಪದ ಮೇಲೆ ಆತನನ್ನು ಶಿಕ್ಷಿಸಿದರು (ಮತ್ತಾಯ 26:63-68). [44]ಭಕ್ತಿ ಹೀನತೆಯು ಅಸಾಧ್ಯತೆಯನ್ನು ಕುರಿತು ಯೋಹಾನ 10:28, 29ರಲ್ಲಿ ಬರೆದದೆ. ಅಲ್ಲಿ ಕುರಿಗಳಿಗೆ ದೇವರ ಸಹಾಯದ ಕುರಿತು, ಅದು ದೇವರಿಂದ ತಪ್ಪಿಸಿಕೊಳ್ಳಬಹುದು. ದೇವರ ಮಗು ತಪ್ಪು ಮಾಡನು ಎಂದಿರದೆ (1 ಕೊರಿಂಥ 10:13). ದೇವರ ಕೈಯಿಂದ ಯಾರೂ ಕಸಕೊಳ್ಳರು ಎಂದಿದೆ. [45]ಮಾರ್ಮನ್ನರು ಕೀರ್ತನೆ 82:6 ಮತ್ತು ಯೋಹಾನ 10:34ನ್ನು ಆಸಕ್ತಿಕರವಾಗಿ ಬಳಸಿ, ನಾವು ಆರಾಧಿಸುವ ದೇವರು ಒಂದು ಕಾಲದಲ್ಲಿ ನಮ್ಮ ಹಾಗೆ

ಇದ್ದರು ಎಂದು ಹೇಳುತ್ತಾರೆ. ನಾವು ದೇವರಾಗುವದು ಅಸಾಧ್ಯ (ದೇವತೆಗಳು). [46]ವಚನ 35: "ದೇವರ ವಾಕ್ಯ ಮೊಟಕಾಗುವದಿಲ್ಲ." ಅಂದರೆ ಪವಿತ್ರಾತ್ಮನ ವಾಕ್ಯಗಳನ್ನು ನಾಶಗೊಳಿಸಲಾಗುವದಿಲ್ಲ ಅಥವಾ ಪಕ್ಕಕಿಡಲಾರೆವು. ಇದನ್ನು ಅಪನಂಬಿಗಸ್ತರು ಅರಿಯಬೇಕು! [47]ಪಸ್ಕ ಹಾಗೂ ಯೇಸುವಿನ ಮರಣದ ಮಾಡಲು ಆತನು ಯೆರೂಸಲೇಮಿಗೆ ಪ್ರವೇಶ ಮಾಡಿದ್ದು. [48]"ಯೇಸುವಿನ ಸೇವೆಯಲ್ಲಿನ ಪಾಲೇಸ್ತೀನ" ಭೂಪಟ ನೋಡಿರಿ. [49]ಯೂದಾಯದ ಭೆಥನಿಗೆ ಕಡೇಯ ಭೇಟಿ (ಯೋಹಾನ 11). ಪಾಲೇಸ್ತೀನಿನ ಇತರೆ ಪ್ರದೇಶಗಳನ್ನು ಭೇಟಿ ಮಾಡಿರಬಹುದು. (ಪಾಲೇಸ್ತಿನ ಭೂಪಟವನ್ನು ಈ ಪಾಠದಲ್ಲಿ ನೋಡಿ. ಪೆರಿಯದಿಂದ ಯೋರ್ದಾನನ್ನು ದಾಟಿ ಪಾಲೇಸ್ತಿನದೊಳಗೆ ಪ್ರವೇಶಿಸುವರು.) ಆದರೆ ಆತನ ಪೆರಿಯದಲ್ಲಿ ಹೆಚ್ಚು ಕಾಲ ಇದ್ದನು. ಈ ಸೇವೆಯ ಬಗ್ಗೆ ನಾಲ್ಕು ಸುವಾರ್ತೆಗಳಲ್ಲಿ ಇರುತ್ತದೆ (ಮತ್ತಾಯ 19:1, 2; ಮಾರ್ಕ 10:1; ಯೋಹಾನ 10:40). ಲೂಕನು ಪ್ರಾರ್ಥಮಿಕ ವಿಚಾರ ತಿಳಿಸಿರುವನು. [50]ಯೋಹಾನನ ಸೇವೆಯಲ್ಲಿ, ಮಹತ್ಕಾರ್ಯಗಳನ್ನು ಮಾಡಲಿಲ್ಲ.

[51]"ನರಿಯನ್ನು ಸಾಯಿಸುವ ಹಾಗೆ ಸಾಯಿಸಿ" ಎಂಬ ಬಳಕೆ U.S. ನಲ್ಲಿ ಇದೆ. ಅದು ಹೆರೋದನ ಕುರಿತ ವಿವರಣೆ. McGarvey ಪ್ರಕಾರ, ಒಬ್ಬನ ಕುರಿತು "ಯೇಸು ಬಳಸಿದ ತಿರಸ್ಕರಿಸುವ ಮಾತಾಗಿದೆ" (J. W. McGarvey and Philip Y. Pendleton, *The Fourfold Gospel or A Harmony of the Four Gospels* [Cincinnati: Standard Publishing Co., 1914], 710). [52]"ನನ್ನ ಗುರಿ ತಲುಪುವೆ" ಎಂಬುದರ ಬದಲು, "ನಾನು ಪೂರ್ಣನಾಗುವೆ" ಎಂದು KJVಯಲ್ಲಿ ಬರೆದದೆ."ಸಂಪೂರ್ಣವಾಗಿ" ಎಂಬ ಗೀಕ್ ಪದವು "ಮುಕ್ತಾಯ" ಅಥವಾ "ಸಂಪೂರ್ಣ" ಎಂದು ಅರ್ಥ. "ಅದು ನೇರವೇರಿತು" (ಯೋಹಾನ 19:30) ಎಂದು ಯೇಸು ಸಿಲುಬೆಯಲ್ಲಿ ಹೇಳಿದಾಗ ಈ ಪದವನ್ನು ಬಲಸಿದರು. NASB ನಲ್ಲಿ "ಗುರಿ" ಎಂದು ಪ್ರಯೋಗಿಸುವುದು, ಯೇಸು ಮರಣ ಮತ್ತು ಅದರಿಂದ ನೆರವೇರಿಸಿದೆಲ್ಲವನ್ನು ಸೂಚಿಸುತ್ತದೆ. [53]ಮತ್ತಾಯ 23:37-39ನಲ್ಲಿ ಈ ಕೂಗು ಮತ್ತೇ ಕೇಳಿಸಿತು.